Mr. SPEAKER.—The question is:

"That clause 1, the title, and the preamble, stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri M. V. RAMA RAO.—I beg to move:

"That the Code of Criminal Procedure (Mysore Amendment) Bill, 1965, be passed."

Mr. SPEAKER.—The question is:

"That the Code of Criminal Procedure (Mysore Amendment) Bill 1965, be passed.

The motion was adopted.

BUDGET ESTIMATES OF THE MYSORE STATE ELECTRICITY BOARD FOR 1965-66

Mr. SPEAKER.—We will resume the debate on the Financial Statement of the Mysore State Electricity Board. The Hon'ble Member Sri Anna Rao will commence.

Sri H. R. KESHAVAMURTHY (Gandasi).—Sir, we are not in a position to get copies of Electricity Supply Rules, 1957. Even in the Library the copies are not available.

Mr. SPEAKER.—The Hon'ble member could have very well brought it to my notice earlier. I will try to get copies now.

†Sri ANNARAO GANAMUKHI (Afzalpur).—Mr. Speaker, I was speaking about the tariff rates which are going to be revised by sanction of the Government. In August 1962, the Board has already revised the tariff rates and not only uniformity has been brought about in regard to thermal power but hydel power. Now again to suggest that the rates will be revised and nearly 4 crores would be realised by of revision of rates, seems to be a proposal which has to be very seriously considered by the Government. Every taxation proposal comes before the Assembly but this is not a taxation measure, as it is a rate which has to be paid by the consuming public. So it is directly imposed by the Board, perhaps with the concurrence of the Government. Therefore, this has to be considered before any revision is done. I was already stating that there is an apprehension also about the uniformity of rates being brought about when the regional grid will commence operation from June. We in Mysore are producing power at cheaper rates whereas the power produced in Madras, Andhra and Kerala are higher as they happen to produce mostly thermal power. We see from the income statement that

we are getting nearly 12 crores from hydel power whereas we are getting only 16 lakhs from the diesel power. So it becomes clear that we are getting hydel power throughout the State and diesel power is going out of existence. Therefore, if this proposal comes and if we are going to supply our cheap electricity to the other States, then a further revision will have to come and if it comes we certainly will be at a great disadvantage. Therefore before joining this regional grid we should have bestowed greater attention. We know that we are producing hydel power at cheap cost whereas in other States though they are producing hydel power the rate obtaining is very less whereas it is high and power is cheap. In this connection we have to think whether consumers of our State will have to share the burdens of other States without equivalisation of rates when the regional grid comes into operation. If the State has agreed to join the regional grid, then they would have to put up a proposal to the Central Government that whereas we are producing hydel, power at cheap cost, the Irrigation projects are being done at considerable cost. We are investing more money in Mysore in irrigation whereas other States are giving at cheaper rates. If this water grid comes into existence then we would be put at advantageous position. It has not been done by the State Government. If Sharavathi power which will be consumed by us in future, it may take about 10 years. Within that the other States are bound to consume more power and so if equivalisation of rates comes about then our cousumers will have to share more burden. Therefore I think upgrading of the revision of rates is not at all fair for this State. If it comes up, the State Government and the Board have to consider the cost of supplying electricity to the consumers in the State at cheaper rates than the rate which will be charged to the consumers in other States. I want to suggest one thing. As the Electricity Board is spending more money on these projects, it is highly necessary that independent regulatory commission should be established in the State to control the financial working of the Electricity Board including the tariff policy. This should be made independent of the Electricity Board so that it may submit its own report about the cost potential and the tariff rates as also the investment before the Public Accounts Committee and through it to the Legislature. Unless this is done, I think, the State Government is not going to help the Electricity Board.

Mr. SPEAKER.—The House will now rise and reassemble after half-an-hour.

The House adjourned at Three of the Clock and reassembled at Thirty-five Minutes past Three of the Clock.

[MR. DEPUTY SPEAKER in the Chair]

SRI ANNA RAO GANAMUKHI.—Sir, I was just now speaking about the revision of rates in our State and here on page 3 of the Annual Financial Statement it is stated that increase of 430 crores revenue expected in 1965-66 is due to expected increase in revision of rates and extra revenue from Munirabad, Bhadra and Sharavati Stage I projects. This sentence gives the clue that because the Sharavathi Valley First Stage, Munirabad and Bhadra Projects have been commissioned, the Government or the Electricity Board is presenting the people with the increase of rates; it means that. The public expected that when big power projects like Sharavathi and Bhadra will be commissioned, will give ample power at cheap rates, whereas this Annual Statement is giving a very sordid picture of what the people expected from the Electricity Board in the shape of revision of rates. It has given sufficient indication to the consumers, industrial and otherwise that the tariff rates will be revised and the expected revenue will be Rs. 430 crores. Sir, I think, this is not a reasonable and a fair proposal for the consumers of the State, because it would have been a great pleasure to the people to see the commissioning of Sharavathi Project and now the increase comes with the commissioning of this project. It is really a very sorry state of affairs. Now, Sir, what should be the reason for the increase? There is one thing. In the Central Electricity Act, there is a provision that power generation, supply and distribution should be entrusted to the Electricity Board of the State. The object of creating Electricity Board is to not only supply and distribution of power but also generation. So, after the construction of the project, it is the duty of the Government to hand over generation of power to the Electricity Board. Whereas, we find here and there is sufficient indication to show that the Government is selling Electric power to the Electricity Board on some hire rate and in turn, the Board sells it to the consumer. I think this is double taxing. It is correct if the Government is going to supply to Electricity Board and if the Board is treated just like an ordinary Company. This should not have been the case. Therefore, I would request the Government immediately to hand over generation portion of the Sharavathi and Bhadra and Munirabad to the Electricity Board so that they may supply power at cheaper rates. Now, Sir, again, I should like to state one thing and that is, the State Government should try to create a State Grid. Instead of going in for regional grid, they should create a State grid. Here I want to ask the Electricity Board through the Government whether they have tried to take power from one Station to another throughout the State. If we see the neighbouring State of Madras, they have done it. They can take power from one station to another to any corner of the State. But here we cannot take Sharavathi power to Gulburga or Bhadra excepting Munirabad. Therefore, instead of thinking in terms of having a regional grid, let us first create a State grid and then think of regional grid so that we may feed power to our own State first to every village just as Madras has done. Here, this

statement makes a sorry reading. If you go to Bidar, there are two villages and if you go to Raichur and Gulburga, there are hardly 29 to 30 villages which are electrified. I think it is not good. Therefore, it is better that the State grid is created and power is supplied throughout the State at cheaper rate. Now about the loan policy, I should like to state only one thing. The Electricity Board is a borrower from the Government. The Audit Report for 1963 and the Public Accounts Committee Report have given the picture of what is taking place in the Electricity Board. I do not know how the State Government could advance money. They borrow the money from the Government and they again lend to the Government. Is it proper for the Government to do like that ? They say by borrowing money from the Government at 5 per cent and invest it at 4 per cent and by that the Board would lose Rs. 80,000 per annum. I do not think any business man would have done it, or any common man would have done it. Is it the intention of the Government that the Electricity Board should incur loss so that it may invest borrowed money at higher interest and then invest it back in the Mysore Development Loan at lower interest ? This is not a good proposition and fuller check has to be kept over this Board as long as this sorry state of affairs continues. Again, Public Accounts Committee has stated that there is no provision in the Central Electricty Act for repayment of loan. As far as capital is concerned, the State Government has not given a single pie of subvention to the Electricity Board since the inception of the Electricity Board. Therefore, I would plead with the Government that all the capital that has been invested by the Government may be treated as subvention and it should not be treated at all as loan so that the people may get some relief and especially the agriculturists who are also being charged higher rates may get some relief and the I. P. sets may be supplied at cheaper rates, not only at cheaper rates but at subsidised rates and power also is supplied at subsidised rates. Therefore, Sir, I would plead that the Electricity Board should be placed on an even keel and if matters are to be mended, the Government should take more interest in creating a sound system of organising the whole show. Here what has happened is, on the one side the Government is incurring more expenditure on the construction of hydro-electric projects and then the Electricity Board is incurring more expenditure on the maintenance and operation. So, both combined together are costing heavily to the consumers. Therefore, the construction cost should be reduced to the lowest minimum; at the same time, operation and maintenance cost also should be reduced so that the combined effect may be reduction in the rate of tariff.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ, 1965-66ನೇ ಸಾಲಿನ ಮೈಸೂರು ರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡಿನ ಆಯವ್ಯಯಪಟ್ಟಿಯನ್ನು ನಾವು ಸರಿಯಾಗಿ ಬಿಡಿಸಿ ನೋಡಿದಲ್ಲಿ ಇದೂ ಸಹಾ ತುಂಬಾ ಅವ್ಯವಹಾರದಿಂದ ಕೂಡಿದ್ದಾಗಿದೆ ಎಂಬುದಾಗಿ ಕಂಡುಬರುತ್ತಿದೆ. ಇದರಿಂದ ಬರತಕ್ಕ ವರಮಾನವನ್ನು ನೋಡಿದಭಾಗದಲ್ಲಿ ಇದು ಆ ಖಾದಿಬೋರ್ಡಿನ ಜೊತೆಗೆ ಸ್ಪರ್ಧೆಮಾಡುವುದಕ್ಕೆ ನಿಂತಿದೆಯೇನೋ ಅನ್ನುವಂತೆ ಕಂಡುಬರುತ್ತಿದೆ. ಈ ಎಲೆಕ್ಟ್ರಿಸಿಟಿ ಬೋರ್ಡಾದರೋ ಒಂದು ದೊಡ್ಡ ಬಂಡವಾಳವಿಲ್ಲದ ಬಡಾಯಿಯ ಸಂಸ್ಥೆಯಾಗಿ ವ್ಯವಹಾರನಡೆಸುತ್ತಿದೆ. ಇದು ಯಾವಾಗ ತಾ. 27-9-57 ರಲ್ಲಿ ಸ್ಥಾಪನೆಯಾಯಿತೋ ಅಂದಿನಿಂದಲೂ ಇದು ಮಾಡಿರತಕ್ಕ ಒಟ್ಟು ಸಾಲ 58

(ಶ್ರೀ ಬಿ. ಭಾಸ್ಕರಶೆಟ್ಟಿ)

ಕೋಟಿ ಚಿಲ್ಲರೆಯಾಗುತ್ತದೆ. ಅಷ್ಟೇ ಅಲ್ಲದೆ ಇನ್ನೂ ಬೇರೆಸಾಲ ಇದೆ. ಆದರೆ ಇದರ ಬಡ್ಡಿಗಾಗೇ ನಾವು 16 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿರುತ್ತದೆ. ಇದನ್ನು ನೋಡಿದರೆ ಈ ಮೂಲ ಧನಕ್ಕೇ ಎಲ್ಲಿ ಧಕ್ಕೆ ಬರುತ್ತದೋ ಎಂಬ ಭಯವುಂಟಾಗುತ್ತಿದೆ. ನಮ್ಮ ಮಾನ್ಯ ಅಣ್ಣರಾಯರು ಹೇಳಿದಂತೆ ಇವರು ವಂಚಿಸುವ ರೀತಿಯಲ್ಲಿ ವ್ಯವಹಾರಮಾಡಿದ್ದಾರೆ. ಆಡಿಟ್ ರಿಪೋರ್ಟಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್ ಯಾವರೀತಿ ಕೆಲಸ ಮಾಡುತ್ತದೆ ಎಂಬುದನ್ನು ವಿಶದವಾಗಿ ತಿಳಿಸಿದ್ದಾರೆ. ಸಾಧಾರಣವಾಗಿ 57ನೇ ಇಸವಿಯಿಂದ 62 ನೇ ಇಸವಿಯ ತನಕ ಈ ಲೆಕ್ಕಾಚಾರದ ಆಡಿಟ್ ಸರಿಯಾಗಿ ಸಿಕ್ಕುವುದೇ ಇಲ್ಲ ಆಡಿಟ್ ಆಗಲಿಲ್ಲ ಎಂದು ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಇದು ಖಾದಿ ಬೋರ್ಡಿಗಿಂತಲೂ ಒಂದು ಹೆಜ್ಜೆ ಮುಂದೆ ಎಂದು ಇದರಿಂದ ಭಾಸವಾಗುತ್ತದೆ. ರಾಜಕೀಯ ತೊಟ್ಟಿಲಲ್ಲಿ ತೂಗುವ ಮಗುವಿನ ಹಾಗೆ ಇದರ ವ್ಯವಹಾರಗಳು ನಡೆಯುತ್ತಾ ಇವೆ.

"By borrowing money from Government at 5% and investing the cash in loans at 4 per cent and 4½ per cent the board would lose an amount of Rs.—82,000 per annum."

ಸರ್ಕಾರದಿಂದ ಅಥವಾ ಸಾರ್ವಜನಿಕರಿಂದ ದುಡ್ಡನ್ನು ಪಡೆದು ಅದನ್ನು ಖಾಸಗಿ ಬ್ಯಾಂಕ್‌ನಲ್ಲಿ ಇಡಬೇಕಾದರೆ ರಾಜಕೀಯ ಪ್ರಭಾವಕ್ಕೆ ಒಳಗಾಗಿಯೇ ಈ ಎಲ್ಲಾ ವ್ಯವಹಾರಗಳೂ ನಡೆದಿವೆ ಎಂದು ನಾನಾದರೂ ಹೇಳುತ್ತೇವೆ. ಈ ಎಲೆಕ್ಟ್ರಿಸಿಟಿ ಬೋರ್ಡಿನ ಮೆಂಬರು ಒಬ್ಬರು ಪ್ರಮುಖ ರಾಜಕೀಯ ಕಾಂಗ್ರೆಸ್ಸಿನ ಮುಖಂಡರು ಆಗಿದ್ದು ಅವರು ಈ ದುಡ್ಡನ್ನು ತಮ್ಮ ಬ್ಯಾಂಕಿನಲ್ಲಿ ಇಡುವಂತೆ ಪ್ರೋತ್ಸಾಹ ಕೊಟ್ಟಿದೆ. ಇದು ರಾಜಕೀಯಕ್ಕೆ ಎಡೆಮಾಡಿಕೊಟ್ಟಿದೆ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೆಲವು ವ್ಯವಹಾರಗಳನ್ನು ನೋಡಿದರೆ ಇದಕ್ಕೆ ಎಷ್ಟು ದುಡ್ಡು ಬರಬೇಕಾಗಿದೆ ಎಂಬುದನ್ನೂ ಕೂಡ ಸರಿಯಾಗಿ ನೋಡುತ್ತಾ ಇಲ್ಲ. ಕೆಲವು ದುಡ್ಡು ತುಂಬಾ ಸಮಯದಿಂದ ಬಾಕಿ ಉಳಿದಿರುವುದು ಮಾತ್ರವಲ್ಲದೆ ರೈಟ್ ಆಫ್ ಮಾಡುವ ಪರಿಸ್ಥಿತಿ ಕೂಡಬಂದಿದೆ.

In December 1961 another public loan to the tune of 296 lakhs was raised at 4½ per cent interest. Further sum of Rs. 199 lakhs was invested with the private bank at 3½ per cent." ... "A sum of 122 lakhs was outstanding on account of supply of power and time barred claims in all five Divisions as on 31st. March 1961."

61ನೇ ಇಸವಿಯವರೆಗೆ ಒಂದು ಕೋಟಿ 6 ಲಕ್ಷ ರೂಪಾಯಿಗಳಷ್ಟು ಟೈಂ ಬಾರ್ ಆಗಿದೆ, ಈ ಅಂದಾಜೇ ಅವರಿಗೆ ಇಲ್ಲ. ಇದನ್ನು ನೋಡಿದರೆ ಈ ಎಲೆಕ್ಟ್ರಿಸಿಟಿ ಬೋರ್ಡು ಯಾವ ತರಹದಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ತಾವೇ ಆಲೋಚನೆ ಮಾಡಬೇಕು. ಸಾರ್ವಜನಿಕರಿಂದ ತರುವ ಹಣವನ್ನು ಅಪವ್ಯಯಮಾಡುವುದು ಎಂದರೆ ಈ ಬೋರ್ಡನ್ನು ಕೆತ್ತೊಗೆಯುವುದೇ ಲೇಸು, ಈ ಬೋರ್ಡಿನಿಂದ ಪ್ರಯೋಜನವಿಲ್ಲ ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯ ಮಾತ್ರವಲ್ಲದೇ ಮೈಸೂರು ರಾಜ್ಯದ ಮಟ್ಟಿಗೆ ಇನ್ನೂ ಮುಂದುವರಿಸಿಕೊಂಡು ಹೇಳುವುದಾದರೆ ಈ ಎಲೆಕ್ಟ್ರಿಸಿಟಿ ಬೋರ್ಡು ತನ್ನ ರಾಜಕೀಯ ಪ್ರಭಾವವನ್ನು ಎಲ್ಲಾ ಕ್ಷೇತ್ರದಲ್ಲೂ ಬೀರ ತೊಡಗಿದೆ. ಪಂಪ್‌ಸೆಟ್‌ಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಅವರು ಕೊಟ್ಟಿರುವ ಸ್ಟೇಟ್‌ಮೆಂಟ್‌ನ್ನು ನೋಡಿದರೆ ಕೋಲಾರ ಜಿಲ್ಲೆಗೆ 7492 ಪಂಪ್‌ಸೆಟ್ಟುಗಳನ್ನು ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2623 ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯವರೇ ಎಲೆಕ್ಟ್ರಿಸಿಟಿ ಬೋರ್ಡಿನ ಅಧ್ಯಕ್ಷರಾಗಿ ಪಂಪ್‌ಸೆಟ್‌ಗಳನ್ನೆಲ್ಲಾ ಅವರ ಜಿಲ್ಲೆಗೇ ಹಾಕಿಬಿಟ್ಟಿದ್ದಾರೆ. ಇದರಲ್ಲೂ ಕೂಡ ಅವ್ಯವಹಾರ, ರಾಜಕೀಯ ಒತ್ತಡ ನಡೆದಿದೆ ಎಂದು ಹೇಳುತ್ತೇನೆ. ಪಂಪ್‌ಸೆಟ್‌ಗಳ ವಿಷಯದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆ ಕಳೆಯುವುದರೊಳಗಾಗಿ 21 ಸಾವಿರ ಪಂಪ್ ಸೆಟ್‌ಗಳನ್ನು ಜಾಸ್ತಿಮಾಡುತ್ತೇವೆ ಎಂದು ತಾವಾದರೂ ಹೇಳುತ್ತೀರಿ. ಆ ರೀತಿ ಹೋದಸಲ ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು. ಇಷ್ಟರವರೆಗೂ ಸಾಧಾರಣ ಅದರ ಕಾಲು ಅಂಶ ಕೂಡ ಆ ಟಾರ್ಜೆಟ್‌ನ್ನು ಮುಟ್ಟಿಲ್ಲ. ನಾವೀಗ ಆಹಾರದ ಅಭಾವದಿಂದ ನರಳುತ್ತಾ ಇದ್ದೇವೆ ಇಂತಹ ಸಂದರ್ಭದಲ್ಲಿ ಪಂಪ್ ಸೆಟ್‌ಗಳನ್ನು ಆದಷ್ಟು ಹೆಚ್ಚಾಗಿ ತಾವು ಕೊಡತಕ್ಕ ಅಭ್ಯಾಸವನ್ನು ಮಾಡದಿದ್ದರೆ ಈ ಆಹಾರದ ಅನಿಶ್ಚಿತ ಪರಿಸ್ಥಿತಿ

ಏನಿದೆ ಇದು ಇನ್ನೂ ಗಂಡಾಂತರ ಪರಿಸ್ಥಿತಿಗೆ ಹೋಗುವ ಮಟ್ಟಕ್ಕೆ ಇಳಿಯುತ್ತದೆ. ಸ್ವಾಮಿ ಕೆಲವು
ಜಿಲ್ಲೆಗಳ ವಿಚಾರ ಹೇಳುವುದಾದರೆ ಅದರಲ್ಲೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ
ಅಲ್ಲಿ 2623 ಪಂಪ್‌ಸೆಟ್ಟುಗಳು ಕೆಲಸ ಮಾಡುತ್ತಾ ಇವೆ. ನಮ್ಮ ಜಿಲ್ಲೆಯಲ್ಲಿ ಬಾಕಿ ಇರಿಗೇಷನ್
ಕೆಲಸಗಳು ಬಹಳ ಕಮ್ಮಿ ಅಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಹಾಕುವುದಕ್ಕೆ ಸಾಧ್ಯವಿಲ್ಲ.
ಹೆಚ್ಚಾಗಿ ನೀರನ್ನು ಎತ್ತಿ ವ್ಯವಸಾಯ ಮಾಡಬೇಕಾಗಿದೆ. ಅದನ್ನು ಅನೇಕಬಾರಿ ಸರ್ಕಾರದ
ವರ ಗಮನಕ್ಕೆ ಇಲ್ಲಿಯ ಸದಸ್ಯರು ತಂದಿದ್ದಾರೆ ಮತ್ತು ನಾನೂ ಕೂಡ ತಂದಿದ್ದೇನೆ. ಆದರೆ ಅದು
ಅರಣ್ಯರೋದನವಾಗಿ ಪರಿಣಮಿಸಿದೆ. ಇದು ಮಾತ್ರವಲ್ಲದೆ ಇನ್ನೊಂದು ತೊಂದರೆ ಏನಾಗಿದೆ
ಎಂದರೆ ಅಲ್ಲಿ ನೂರಕ್ಕೆ 75 ಮಂದಿ ಚಾಲಗೇಣಿ ರೈತರು. ಒಮ್ಮೆ ಅದಷ್ಟುಬೇಗ ಅವರಿಗೆ ಯಾವ
ತರಹದ ತೊಂದರೆಯೂ ಮಾಡುವುದಿಲ್ಲ ಪಂಪ್ ಸೆಟ್‌ಗಳನ್ನು ಕೊಡುತ್ತೇವೆ ಎಂದು ಇದೇ ಸಭೆಯ
ಲ್ಲಿ ಘೋಷಿಸಿ, ಸ್ವಲ್ಪ ಸಮಯ ಹೋದಮೇಲೆ ಅವರು ಏನಾದರೂ ಜವಾಬ್ದಾರಿಯನ್ನು ಕೊಡ
ಬೇಕು ಕೊಡದಿದ್ದರೆ ಪಂಪ್‌ಸೆಟ್ಟನ್ನು ಕೊಡುವುದಕ್ಕಾಗುವುದಿಲ್ಲ ಎಂದು ಕಾನೂನು ಬದಲಾಯಿಸಿದ್ದ
ರಿಂದ ಆ ಚಾಲಗೇಣಿ ರೈತರು ಪಂಪ್ ಸೆಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದೇ ಇದ್ದು
ಅವರ ವ್ಯವಸಾಯದ ಪರಿಸ್ಥಿತಿ ದಿನ ಹೋದಂತೆ ಕುಂಠಿತವಾಗುತ್ತಾ ಇದೆ. ಆದ್ದರಿಂದ ತಾವು ದೊಡ್ಡ
ಮನಸ್ಸುಮಾಡಿ ಪಂಪ್‌ಸೆಟ್ಟುಗಳ ಜವಾಬ್ದಾರಿಯನ್ನು ತಾವೇ ತೆಗೆದುಕೊಂಡು ಚಾಲಗೇಣಿ ರೈತರಿಗೆ
ಪಂಪ್‌ಸೆಟ್‌ಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡದಿದ್ದರೆ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುತ್ತೇನೆ
ತಮ್ಮ ಅಧಿಕ ಆಹಾರ ಬೆಳೆಸುವ ಯೋಜನೆ ಏನಿದೆ ಅದು ಕಾರ್ಯಗತವಾಗುವಂತೆ ಇಲ್ಲ ಎಂದು
ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಇನ್ನೊಂದು ವಿಷಯ ಪಂಪ್‌ಸೆಟ್ಟುಗಳನ್ನು ಸರ್ಕಾರ
ದಿಂದ ಕೊಡುವಾಗ ಎಲ್ಲಿಂದ ಕೊಡುತ್ತೀರಿ ಎಂಬುದು ಜನತೆಗೆ ಸರಿಯಾಗಿ ತಿಳಿಯದಂತಹ ಪರಿಸ್ಥಿತಿ
ಇದೆ. ಕೆಲವು ಜನರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸಿಗೆ ಅರ್ಜಿ ಹಾಕುತ್ತಾರೆ. ಕೆಲವು ಜನರು
ಎಲೆಕ್ಟ್ರಿಸಿಟಿ ಬೋರ್ಡಿಗೆ ಅರ್ಜಿ ಹಾಕುತ್ತಾರೆ. ಎಲೆಕ್ಟ್ರಿಸಿಟಿ ಬೋರ್ಡಿಗೆ ಅರ್ಜಿ ಹೋದರೆ ಅವರು
ಅದನ್ನು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ ಕಳುಹಿಸುತ್ತಾರೆ. ಹೀಗೆ ರೈತರು ಆಫೀಸಿನಿಂದ
ಆಫೀಸಿಗೆ ಸುತ್ತಾಡುವ ಪರಿಸ್ಥಿತಿಯಲ್ಲಿ ಎರಡುಮೂರು ವರ್ಷ ಕಳೆಯುತ್ತದೆ. ಅರ್ಜಿಹಾಕಿ ಮೂರು
ವರ್ಷವಾದರೂ ಪಂಪ್‌ಸೆಟ್ ಸಿಕ್ಕದ ಪರಿಸ್ಥಿತಿ ಇದೆ. ಇದನ್ನು ಒಂದು ಕಡೆಯಲ್ಲಿ ನಿರ್ದಿಷ್ಟವಾಗಿ
ಇಟ್ಟು ಆದಷ್ಟು ಬೇಗ ರೈತರಿಗೆ ಒದಗಿಸುವ ಒಂದು ವ್ಯವಸ್ಥೆಯನ್ನು ಮಾಡಬೇಕು. ಇಲ್ಲದೇ
ಇದ್ದರೆ ಅವರು ಆಫೀಸಿನಿಂದ ಆಫೀಸಿಗೆ ತಿರುಗಬೇಕಾಗುತ್ತದೆ. ಆದ್ದರಿಂದ ತುಂಬಾ ತೊಂದರೆ
ಯಾಗುತ್ತಾ ಇದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಎಲ್ಲಾ ಜಿಲ್ಲೆಯಲ್ಲೂ ಇದೆ ತರಹ ನಡೆ
ಯುತ್ತಿದೆ ಎಂದು ಕಾಣುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಈ ಎಲೆಕ್ಟ್ರಿಸಿಟಿ
ಬೋರ್ಡಿನ ವ್ಯವಹಾರದ ಬಗ್ಗೆ ನಾನೇ ದೂರನ್ನು ಕೊಟ್ಟಿದ್ದೇನೆ, ವೈರ್ಸ್ ಮತ್ತು ಫೌಂಡೇಷನ್‌ಗೆ
ಸಿಮೆಂಟು ಮುಂತಾದುವುಗಳನ್ನು ಎಷ್ಟು ತೆಗೆದುಕೊಳ್ಳುತ್ತಾರೋ ಅದು ಅದಕ್ಕೆ ಉಪಯೋಗ
ಮಾಡುವುದೇ ಇಲ್ಲ. ಲೈನ್‌ಮನ್‌ಗಳು ಮತ್ತು ಇನ್ನಿತರರು ಯಾರಿದ್ದಾರೆ ಅವರು ಸಿಮೆಂಟನ್ನು ಓಪನ್
ಮಾರ್ಕೆಟ್‌ನಲ್ಲಿ ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. ಟ್ರಾನ್ಸ್‌ಫಾರ್ಮರ್ಸ್‌ಗೆ ಫೌಂಡೇಷನ್
ಹಾಕಲು 6 ಮೂಟೆ ಸಿಮೆಂಟ್ ಬೇಕಾಗುತ್ತದೆ ಎಂದು ತೆಗೆದುಕೊಂಡು ಹೋಗಿ ಒಂದು ಗೋಣಿ
ಸಿಮೆಂಟನ್ನು ಉಪಯೋಗ ಮಾಡಿರುವುದನ್ನು ನಾನೇ ನೋಡಿದ್ದೇನೆ. ಅದೇ ರೀತಿ ಎಲೆಕ್ಟ್ರಿಕ್
ವೈರ್ಸ್ ಕೂಡ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಲ್ಪಡುತ್ತಿದೆ. ಇದು ನಿಜವಾಗಿಯೂ ನಂದರಾಯನ
ಬದುಕಿನಂತೆ ನಂದರಾಯನ ಬದುಕು ನರಿ ನಾಯಿಗಳ ಪಾಲು ಆಯಿತು ಅನ್ನುವ ಹಾಗೆ ಯಾರೋ
ತಿನ್ನುತ್ತಾ ಇದ್ದಾರೆ. ಅಂತೂ ಪಂಪ್‌ಸೆಟ್ಸ್ ಏನಿದೆ ಅದನ್ನು ತಮ್ಮ ಟಾರ್ಜೆಟ್ ಇಷ್ಟರತನಕ ಹೊಂದ
ಲಿಕ್ಕೆ ಆಗಲಿಲ್ಲ ಎಂಬುದು ಬಹಳ ವಿಷಾದವಾದ ಸಂಗತಿಯಾಗಿದೆ, ನಮ್ಮ ನೆರೆ ಪ್ರಾಂತಗಳಾದ ಮದ
ರಾಸು, ಮತ್ತು ಅಂಧ್ರದವರು 64 ನೇ ಇಸವಿ ಜೂನ್ ಅಂತ್ಯದವರೆಗೂ ಎರಡು ಲಕ್ಷಪಂಪ್‌ಸೆಟ್ಟು
ಗಳನ್ನು ಹಾಕಿದ್ದಾರೆ, ನಮ್ಮ ಮೈಸೂರು ಸರ್ಕಾರದವರು ಹಾಕಿರುವುದು 30 ಸಾವಿರದವರೆಗೂ
ಬಂದಿದೆ. ಒಂದಾನೊಂದು ಕಾಲದಲ್ಲಿ ಮೈಸೂರು ವಿದ್ಯುಚ್ಛಕ್ತಿ ವಿಷಯದಲ್ಲಿ ಬಹಳ ಮುಂದಿದ್ದು
ಹೆಸರು ಗಳಿಸಿತ್ತು. ಹಿಂದೆ ಎಷ್ಟು ಮುಂದಿತ್ತೋ ಈಗ ಅಷ್ಟು ಹಿಂದಿದೆ; ಎಲ್ಲ ದೇಶಗಳಿಗೂ ಹಿಂದಿದೆ.
ಶರಾವತಿಯಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ತಯಾರಾಗುತ್ತಿರುವಾಗ ದೇಶವನ್ನೆಲ್ಲಾ ಅದರಿಂದ
ಬೆಳಕು ಮಾಡಲು ಸರಿಯಾದ ಕಾರ್ಯಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣವೇನು ? ದೇಶದ
ಜನರಿಂದ ಕೋಟ್ಯಾಂತರ ರೂಪಾಯಿಗಳನ್ನು ಪಡೆದು ಅವರಿಂದ ಹಣವನ್ನು ಸುಲಿಗೆಮಾಡಿ ಪವರನ್ನು
ಉತ್ಪತ್ತಿಮಾಡಿ ಅವರಿಗೆ ಅದರ ಸದುಪಯೋಗವಾಗದಿದ್ದರೆ ಏನು ಹೇಳಬೇಕು ? ಆ ಹಣವೆಲ್ಲಾ
ಸರಿಯಾಗಿ ಖರ್ಚಾಗದೆ ದುರುಪಯೋಗವಾಗಿರುವುದಾಗಿ ಎಲ್ಲರೂ ದೂರುತ್ತಿದ್ದಾರೆ. ಮುಂದಾ
ದರೂ ಕೂಡ ಹೀಗಾಗದಂತೆ ಸರಕಾರ ಒಳ್ಳೆಯ ಹಿಡಿತವನ್ನಿಟ್ಟುಕೊಳ್ಳಬೇಕೆಂದು ಒತ್ತಿ ಹೇಳುತ್ತೇನೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

4-00 P.M.

ಸ್ವಾಮಿ, ವಿದ್ಯುಚ್ಛಕ್ತಿ ಮಂಡಲಿ 27ನೇ ಸೆಪ್ಟಂಬರ್ 57ರಿಂದ ನಷ್ಟದಲ್ಲೇ ಕೆಲಸ ಮಾಡುತ್ತಿದೆ. ಇದು ಜನರು ಹೇಳುವ ಹಾಗೆ ಮೈಸೂರಿನ ಮಾದರಿ ಬೋರ್ಡ್ ಆಗಿದೆ. ಇಲ್ಲಿಯವರೆಗೆ ಈ ಬೋರ್ಡು ಅಥವಾ ಯಾವ ಬೋರ್ಡು ಕೂಡಾ ಲಾಭವನ್ನು ಸಂಪಾದಿಸಿಲ್ಲ. ಹಿಂದೆ ಸ್ಥಾಪಿಸಿದ್ದ ಆ ಬೋರ್ಡುಗಳ ಜೊತೆಗೆ ಇದೊಂದು ಬೋರ್ಡು ರಚಿಸಲ್ಪಟ್ಟಿದೆ. ಇಷ್ಟು ಮಾತ್ರವಲ್ಲದೆ ತಾವು ವಿದ್ಯುಚ್ಛಕ್ತಿ ಬೋರ್ಡು ನಡೆಸಿಕೊಂಡು ಹೋಗುವ ವ್ಯವಹಾರವನ್ನು ನೋಡಬೇಕು. ರಾಜಕೀಯ ಪ್ರಭಾವಕ್ಕೆ ರಾಜಕೀಯ ಒತ್ತಡಕ್ಕೆ ಬಲಿ ಬೀಳದಹಾಗೆ ಹೊಸದಾಗಿ ರಚಿತವಾಗಿರುವ ಬೋರ್ಡು ಹುಷಾರಾಗಿರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಷ್ಟರವರೆಗೆ ಖಾಸಗಿಯವರು ಅಧ್ಯಕ್ಷರಾಗಿ ಮಂಡಲಿಯನ್ನು ರಚಿಸಿದ್ದರು. ಈ ಸಲ ಒಳ್ಳೆಯ ಕೆಲಸ ಮಾಡಿದ್ದಾರೆ, ಒಬ್ಬ ಆಫೀಸರನ್ನು ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರನ್ನಾಗಿ ನೇಮಿಸಿರುವುದರಿಂದ ಈ ಮಂಡಲಿಯು ರಾಜಕೀಯ ಒತ್ತಡಕ್ಕೆ, ಪ್ರಭಾವಕ್ಕೆ ಒಳಗಾಗದೆ ಸರಿಯಾಗಿ ಕೆಲಸ ನಡೆಸಿಕೊಂಡು ಹೋಗುತ್ತದೆಂದು ಆಶಿಸುತ್ತೇನೆ.

ಸ್ವಾಮಿ, ಪಂಪುಸೆಟ್ಟುಗಳನ್ನು ಒದಗಿಸಿರುವ ವಿಚಾರ ಆಗಲೇ ಹೇಳಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಈಗ 5 ಲಕ್ಷ ಎಕರೆಗಳಲ್ಲಿ ಮೂರು ಬತ್ತದ ಬೆಳೆ ಆಗುತ್ತಿದೆ. ಸಾಧಾರಣವಾಗಿ ಅದರಿಂದ 2, 47, 500 ಟನ್ ಬತ್ತ ಒದಗುತ್ತಿದೆ. ಆದರೆ ಈಗ 4,600 ಟನ್ ಬತ್ತ ನಮಗೆ ಕಡಮೆಬೀಳುತ್ತಿದೆ. ಇನ್ನೂ ಎರಡೂವರೆ ಸಾವಿರ ಪಂಪುಸೆಟ್ಟುಗಳನ್ನು ನಮಗೆ ಕೊಟ್ಟರೆ ನಮಗೆ ಸಾಕಾದಷ್ಟು ಬೆಳೆದು ಇನ್ನೂ ಒಂದೆರಡು ಜಿಲ್ಲೆಗಳಿಗೆ ಸಹ ಒದಗಿಸಲು ಅವಕಾಶವಾಗುತ್ತದೆ. ಆದುದರಿಂದ ನಮಗೆ ಹೆಚ್ಚು ಪಂಪುಸೆಟ್ಟುಗಳನ್ನು ಜಾಗ್ರತೆ ಒದಗಿಸಬೇಕೆಂದು ವಿನಂತಿ ಮಾಡುತ್ತೇನೆ. ಹಾಗೆ ಮಾಡುವಾಗ ಅದಕ್ಕೆ ಬೇಕಾದ ಪವರನ್ನೂ ಕೂಡ ಕೊಡುವ ಏರ್ಪಾಡು ಮಾಡಬೇಕು. ಸರಕಾರದ ಮೂಲಕ ಪಂಪುಸೆಟ್ಟುಗಳನ್ನು ಕೊಟ್ಟು ನಾಲ್ಕೈದು ವರ್ಷಗಳಾಗಿದ್ದರೂ ಅಂಥವರಿಗೆ ಪವರ್ ಕೊಡದೆ ನಿನ್ನೆಮೊನ್ನೆ ಕೊಟ್ಟವರಿಗೆ ಪವರನ್ನು ಕೊಡುತ್ತಿದ್ದಾರೆ. ಕೆಲವರು ಸಾಲ ಮಾಡಿ ಪಂಪುಸೆಟ್ಟುಗಳನ್ನು ಪಡೆದು ಅದನ್ನು ಇನ್‌ಸ್ಟಾಲ್ ಮಾಡಿ 3—4 ವರ್ಷಗಳಾದರೂ ಸಹ ಅವರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿಲ್ಲಾ ಇದನ್ನು ಗಮನಿಸಿ ಆದಷ್ಟು ತೀವ್ರವಾಗಿ ರೈತರಿಗೆ ವಿದ್ಯುಚ್ಛಕ್ತಿಯನ್ನು ಮೊದಲು ಒದಗಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಒಂದು ಸಂದರ್ಭದಲ್ಲಿ ಉತ್ತರ ಹೇಳುತ್ತಾ ಬೇಕಾದ ಮೆಟೀರಿಯಲ್ ಸಾಕಾದಷ್ಟಿಲ್ಲವೆಂದು ಹೇಳಿದರು. ಆದಷ್ಟು ಬೇಗ ಅದನ್ನು ಹೆಚ್ಚಾಗಿ ತರಿಸಿ ಪವರನ್ನು ಜಾಗ್ರತೆ ಒದಗಿಸಬೇಕು ಎಂದು ಹೇಳಿ ಮುಂದಾದರೂ ವಿದ್ಯುಚ್ಛಕ್ತಿ ಬೋರ್ಡಿನ ಒಂದು ವ್ಯವಹಾರವನ್ನು ಚೆನ್ನಾಗಿ ನಡೆಸಿಕೊಂಡು ಹೋಗಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† Sri K. S. SURYANARAYANA RAO (Mysore City).—Mr. Speaker Sir, I would like to open my remarks with reference to the Board's proposal to revise the tariffs. Sir, it is a sorry state of affairs, I should say that we are, faced with a revision of tariffs. I wish the Hon'ble Minister would make a statement that the revision is of a downward trend and not an upward trend. It would be wishful thinking if I say it is a downward revision. We were told from house-tops that the State would get power at the cheapest rates in the world. For whose benefit this power is generated. I do not know. We were told that Sharavathi would generate maximum power at the cheapest cost, and Mysore could produce hydel power comparably at a lower rate than any other State and substantially the power generation has increased. So, there was a partial jubilation that this State might get some benefits, that the consuming public would get some benefits out of this huge generation of power. But it is a pity that at the sametime, we were told that the tariffs would be revised and this has dampened the common man's enthusiasm. Sir, I can, tell you on the floor of this House that never in the history of Mysore, which is known

to be the foremost generator of power we have ever faced such a situation as this. Even today, I can tell you that power could be sold at a cheaper rate if the Government so minds. I do not know why Government is not for selling power at a cheaper rate. I do not know whether the common man is in the picture. If the future or the posterity are to be benefited by it, why should I suffer ? Should not the present generation also get some benefit. If I may not live to see the fruits of my own labour, why should I labour ? If this is the way things are being done, it only shows that we are not giving any benefit to the common man or to the consuming public, but we are interested in doubling or trebling or making four times our plans. Our next plan is supposed to be of the order of 500 crores. I do not know whether the common man will have any benefit. In all these three Plans we have never had any benefit. On the other hand we have had disadvantages. It was stated... let us tighten our belts. Agreed. But how long ? That is the problem I very much therefore wish that these tariff revision is given up.

Sri VEERENDRA PATIL (Minister for Public Works).—I would like to know whether the Hon'ble Member has made a study of the tariffs, how our rates compare with the rates of other states in the country.

Sri K. S. SURYANARAYANA RAO.—Because you have mentioned, I will tell you. In Bagalkot or in any other place, where there is private enterprise, Gadag-Bettigere Municipality for example, where hydel power is sold at a little higher rate, will it be alright to say that they are paying more why don't you pay ? Why should we pay ? When power generation is at the cheapest rate, why should we not get power at the cheapest rate ? If in Madras State, they run thermal stations and produce power and is sold at a higher rate, should I also pay at that higher rate ? I cannot understand such an argument. If the cost of generation of power in some other State in more and if the consumer there pays more, should I also pay more ? In a Welfare State the maximum benefit should go to the common man. Here, for whose benefit should there be increase in revenue. Because somebody pays more, you also pay more is not an argument. Suppose I put the same question—if Mysore State can produce power at two or three or five paise at the maximum, why should I not have it at ten paise, taking hundred per cent profit for expenditure ? Because Madras pays a little more or Andhra pays a little more, why should I also pay more—that is my argument.

Sri VEERENDRA PATIL.—Hon'ble Member has not understood me. I never said that we are going to levy the same rates as other States are levying. I wanted the Hon'ble Member to give comparative figures, whether our rates are lower than those obtaining in the neighbouring States or if it is on par with the neighbouring States, or if it is higher than the neighbouring States. If it is more, then there is cause for the Hon'ble Member to argue why he should pay more, why he should not get benefit when generation of power costs less. I should like the Hon'ble Member to compare and let this House know what percentage it is more than the tariff in the adjoining States or whether

(SRI VEERENDRA PATIL)

it is just on par with the other States. I would only wish to know from the Hon'ble Member whether he has made a study of the tariff rates existing in neighbouring States and speaking.

SRI K. S. SURYANARAYANA RAO.—Sir, I put the very argument. If the neighbouring State is charging more, why should I pay more? What happens is, the general spiral of price goes up. Why should it not be less than what we are paying to-day when we produce the power at lesser cost than the neighbouring States? Is it not possible, I ask them, to run this on a basis more beneficial to the consumer? Sir, these figures give certain facts which are absolutely misleading. If a private enterprise can run on a profitable basis, why not a State Government run it on par? We are losing every year. Even this year, we are losing 19 lakhs—minus 19 lakhs. So, with the increased production, with the increased potentiality, with lessening the cost, still the minus balance does not go from the papers.

SRI VEERENDRA PATIL.—Sir, I would like to draw the attention of the Hon'ble Member to page 2. The interest that the Electricity Board is giving to Government from 58-59 so far is 11 crores. You should not forget this fact, when you are commenting on the Electricity Board.

SRI K. S. SURYANARAYANA RAO.—Sir, may be, they are paying interest to Government. But, this defect or lacuna should have been over-come, should have been cleared and this heavy interest rate avoided by payment towards principal; that should have been done. Instead of that to say: you pay more because we are paying more interest, is not an argument. You should have rectified the defects of the Board and see that the Board pay the loan and reduce the interest.

Sir, I oppose this tariff revision is on another ground. It is mis-leading. On page 3 it is said: "Increase of Rs. 4.30 crores revenue expected in 65-66 is due to expected increase in revision of rates and extra revenue from Munirabad, Bhadra and Sharavati Valley I Stage."

But on page 55, you will kindly see the Abstract of Revenue Receipts. The total receipt given is on the revised tariffs as also the additional revenue on these projects. On page 55, it is made to appear that the increase is due to normal service of power generated on Bhadra, Sharavathi etc., etc. This would suggest that the increased revenue is only due to the extra power that is generated, whereas here you want to treat this 4.3 crores as revision of tariffs. We do not get a picture of the percentage of increase in tariff. Sir, they raise loan every year. This year they want to take 200 lakhs. Last year they drew 2 crores. Have they spent that money? They invest it on a short term and long term credits. They draw money from Government or whatever source it is, at a higher rate and invest it on lower rate. From this investment they are getting 15 lakhs interest. But, I say with certainty that this 15 lakhs is not an income. It is a loss; after

paying 20 or 25 lakhs, they get 15 lakhs. This is the way the Board is functioning. The Government has no grip over the finances of the Board. They have no practical approach to the problem. As a matter of fact, as my friend referred to it, the Accountant-General says that the accounts are not according to what it should be. That shows the accounting procedure is not correct; the financing procedure is not correct. The finances have not been audited and there has been extravagance in investment in the Banks. Therefore, Sir, I fail to understand all this. If a proper check is there on the administration of the Board and if it is effectively and efficiently managed, then, instead of having this minus balance, we can run it on surplus balance and instead of thinking of higher tariff, we can think of lower tariff.

SRI G. DUGGAPPA (Holalkere).—Sir, I rise to supplement the argument of my friend. The Minister said that the Board is paying so much of interest to Government. From whom did the Board receive this money? It is from the Government and they are paying interest to Government. In December 1961 the Board raised a public loan of 202.96 lakhs at $4\frac{1}{2}$ per cent interest. A further sum of 199 lakhs was invested with private banks at a rate of $3\frac{1}{2}$ per cent to 4 per cent. They are not able to say the exact loss and still the Minister says that the Board is paying so much interest to Government which I cannot understand.

SRI K. S. SURYANARAYANA RAO.—What is the financial position of the Board? Even according to them, they have a very heavy closing balance. In spite of that, they still go on drawing and investing in Government and private securities and in call deposits and long-term deposits. Out of Rs. 7 crores worth of stores, we are drawing Rs. 2 crores worth of stores and 5 crores worth of stores are locked up. This has been the state of affairs for years together. Who is responsible for this heavy interest charges? Therefore, it does not seem that they have applied their minds at all; they have simply allowed things to drift. No shrewd business undertaking would have allowed this huge locking up of capital in stores. In this connection, I may say that even the petrol stock is not verified.

This is a budget which does not give the correct figures. On page 11 we are supposed to believe that the total budget estimate is Rs. 1,934 lakhs whereas it is only Rs. 934 lakhs. I do not know how such mistakes happen; there are too many such mistakes. Even in framing the budget and preparing the papers for our consideration, they have no consideration for anybody. They think that the Members can speak anything they like. They can compliment or criticise but still we will go on in much the same way—this is the way in which the Board functions. Everything is wrong about this Board. Everything should be gone into and matters should be set right. The Public Accounts Committee has endorsed the views expressed by us on the floor of the House. I want to know what action has been taken to remedy these things. I for one would not agree for any enhancement of the tariff.

(SRI K. S. SURYANARAYANA RAO)

Granting that everything is all right, what is it that they have done on the works side. In the year 1963-64 they were expected to lay transmission line of 1,470 kilometres but their achievement is only 864 kilometres. In 1964-65 they were supposed to lay 1,400 kilometres and their achievement was only 350 kilometres. Why this very poor achievement? It should be on the increase instead of on the decrease. We have men, material, stores, wire and everything and still we do not work. The complaint is there is no material. Is this a progressive way of doing things? If the working of the Board is a progressive one, their contribution towards the depreciation fund, reserve fund, etc., should be on the increase whereas it is lesser this year. With increased commitments, naturally there should be increasing contribution; but the contribution is diminishing. Is this the way the Board should function? I for one would not agree that that is the way in which it should function.

Granting that they do things all right, have they been doing things in a rational way. The regionwise figures on pages 28 to 51 speak for themselves. I do not want to be parochial; I am for the development of all the regions. As regards the figures about rural electrification and supply of I. P. sets, I only wish that Government would see that such glaring imbalances are not there. A particular area may be a little more advanced, but that does not mean that it should lag behind till all the others come up to that level.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಟ್ರಾನ್ಸ್‌ಮಿಷನ್ ಲೈನ್ಸ್ ಇದ್ದರೆ ಅಲ್ಲಿ ಏನಾದರೂ ಮಾಡಬಹುದು.

Sri K. S. SURYANARAYANA RAO.—When you are expected to lay 1,480 kilometres you laid only 800 kilometres. What happened to the rest?

On these grounds I would strongly urge the Government not to revise the rates. On the other hand they should reduce the rates so far as the consumer is concerned and reduce them still further so far as food production is concerned. They can supply at 5 Paise or even less to the agriculturists. I would strongly urge for a downward reduction rather than an upward revision of the rates.

4-30 P. M.

ಶ್ರೀ ಬಿ. ಡಿ. ಜತ್ತಿ.—ಈಗ ದಕ್ಷಿಣ ಇಂಡಿಯಾದಲ್ಲಿ ಕೇರಳ, ಆಂಧ್ರ ಮತ್ತು ಮದ್ರಾಸ್ ಈ ರಾಜ್ಯಗಳಲ್ಲಿ ಎಲೆಕ್ಟ್ರಿಸಿಟಿ ರೇಟುಗಳು ನಮ್ಮ ರಾಜ್ಯಕ್ಕಿಂತ ಜಾಸ್ತಿ ಇದೆ. ಆದರೂ ಸಹ ಈಗ ಆ ರಾಜ್ಯಗಳವರು ಎಲೆಕ್ಟ್ರಿಸಿಟಿ ರೇಟನ್ನು ಏರಿಸಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಆದರೆ ಈಗ ತಾವು ಇಲ್ಲಿ ಎಲೆಕ್ಟ್ರಿಸಿಟಿ ರೇಟನ್ನು ರೆಡ್ಯೂಸ್ ಮಾಡಬೇಕೆಂದು ಹೇಳುತ್ತಿದ್ದೀರಿ. ಇದು ಹೇಗೆ?

Sri K. S. SURYANARAYANA RAO.—That is another point. That is one gift that you are getting to-day by revision. The Finance Minister will come forward with another proposition that even after this revision we are not on par with the neighbouring States and that we have to be

on par with neighbouring States for uniformity by paying still higher rates. Therefore, I warn the House that there will still be another revision.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಅಧ್ಯಕ್ಷರೇ, 1965-66ನೆಯ ಸಾಲಿನ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಬೋರ್ಡಿಗೆ ಸಂಬಂಧಿಸಿದ ಆಯವ್ಯಯ ಅಂದಾಜಿನ ಚರ್ಚೆಯ ವಿಷಯದಲ್ಲಿ ನಾನು ನಾಲ್ಕು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಈ ಎಲೆಕ್ಟ್ರಿಸಿಟಿ ಬೋರ್ಡ್ ಆದಮೇಲೆ ವಿದ್ಯುಚ್ಛಕ್ತಿ ಇಲಾಖೆ ಬಹಳ ದಕ್ಷತೆಯಿಂದ ಕೆಲಸಮಾಡುತ್ತದೆ. ಎಂದು ನಾವೆಲ್ಲರೂ ತಿಳಿದುಕೊಂಡಿದ್ದೆವು. ಆದರೆ ಈಗ ಆ ಇಲಾಖೆ ಕೆಲಸ ಮಾಡುವುದನ್ನು ನೋಡಿದರೆ ಅದಕ್ಕೆ ತದ್ವಿರುದ್ಧವಾಗಿದೆ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇವೊತ್ತು ಈ ವಿದ್ಯುಚ್ಛಕ್ತಿ ಇಲಾಖೆ ಕೆಲಸ ಮಾಡತಕ್ಕ ರೀತಿ ನಮೂನೆಯನ್ನು ನೋಡಿದರೆ ಜನಗಳು ಬಹಳ ಕಷ್ಟವನ್ನು ಅನುಭವಿಸಬೇಕಾದಂತಹ ಪರಿಸ್ಥಿತಿ ಬಂದಿದೆ. ವಿದ್ಯುಚ್ಛಕ್ತಿ ಬೋರ್ಡಿಗೆ ಇಷ್ಟು ಕೋಟಿ ರೂಪಾಯಿಗಳು ಬೇಕು, ಅಷ್ಟು ಕೋಟಿ ರೂಪಾಯಿಗಳು ಬೇಕು ಎಂದು ದುಡ್ಡನ್ನು ಒದಗಿಸಿಕೊಳ್ಳುವುದೇ ಬೋರ್ಡಿಗೆ ಒಂದು ಕೆಲಸ ಆಗಿದೆಯೇ ಹೊರತು ಕಾಲ ಕಾಲಕ್ಕೆ ಸರಿಯಾಗಿ ಯಾವ ಕೆಲಸ ಕಾರ್ಯಗಳನ್ನೂ ಅವರು ಮಾಡುವುದಿಲ್ಲ. ಇರುವೆಯ ಗೂಡಿನ ಹಾಗೆ ಬೇಕಾದಷ್ಟು ಸಿಬ್ಬಂದಿಯನ್ನು ಮಾತ್ರ ನೇಮಕ ಮಾಡಿಕೊಂಡಿದ್ದಾರೆ. ಆದರೆ ಆ ಆಫೀಸಿನಲ್ಲಿ ನೌಕರರು ಏನು ಕೆಲಸ ಕಾರ್ಯಗಳನ್ನು ಮಾಡುತ್ತಾರೆಯೋ ಅದು ನಮಗಂತೂ ಅರ್ಥವಾಗುವುದಿಲ್ಲ. ವಿದ್ಯುಚ್ಛಕ್ತಿ ಬೋರ್ಡಿನ ಆಫೀಸಿಗೆ ಒಂದು ಕಾಗದವನ್ನು ಬರೆದರೆ ಅದಕ್ಕೆ ಜವಾಬೇ ಬರುವುದಿಲ್ಲ. ಕೊನೆಗೆ 10 ರಿಮೈಂಡರುಗಳನ್ನು ಬರೆದರೂ ಕೂಡ ಉತ್ತರವೇ ಬರುವುದಿಲ್ಲ. ಆ ಆಫೀಸಿನವರಿಗೆ ಯಾರಾದರೂ ಕಾಗದ ಬರೆದರೆ ಅದಕ್ಕೆ ಜವಾಬು ಕೊಡಬೇಕು ಎನ್ನುವ ಪರಿಪಾಠ ಇದೆಯೋ ಅಥವಾ ಇಲ್ಲವೋ ನನಗಂತೂ ಅರ್ಥವಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಅದೇನೆಂದರೆ ಗುಂಡ್ಲುಪೇಟೆ ಮುನಿಸಿಪಾಲಿಟಿಯವರಿಗೆ ವಿದ್ಯುಚ್ಛಕ್ತಿ ಬೋರ್ಡಿನವರು ಅಕ್ರ್ಯಾಯ್ ಹೌಸ್‌ಟ್ಯಾಕ್ಸ್ ಕೊಡಬೇಕಾಗಿತ್ತು: ಆ ಸಂಬಂಧದಲ್ಲಿ ವಿದ್ಯುಚ್ಛಕ್ತಿ ಬೋರ್ಡಿನವರಿಗೆ 100 ಕಾದಗಳನ್ನು ಬರೆದರೂ ಕೂಡ ಅದಕ್ಕೆ ಇವೊತ್ತಿನವರೆಗೂ ಜವಾಬೇ ಕೊಟ್ಟಿಲ್ಲ. ಆದರೆ ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಮುನಿಸಿಪಾಲಿಟಿಯವರಿಂದರಾಗಲೀ ಅಥವಾ ಬೇರೆ ಯಾವ ಜನಗಳಿಂದರಾಗಲೀ ಏನಾದರೂ ದುಡ್ಡು ಬರಬೇಕಾಗಿದ್ದರೆ ಕರೆಂಟ್ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಅವರನ್ನು ಹೆದರಿಸಿ ಅವರಿಂದ ದುಡ್ಡನ್ನು ಕಿತ್ತುಕೊಳ್ಳುತ್ತಾರೆ. ಹೀಗೆ ಗುಂಡ್ಲುಪೇಟೆ ಮುನಿಸಿಪಾಲಿಟಿಯವರಿಗೆ ವಿದ್ಯುಚ್ಛಕ್ತಿ ಬೋರ್ಡಿನವರು ಕೊಡಬೇಕಾದ ಅಕ್ರ್ಯಾಯ್ ತೆರಿಗೆಯನ್ನು ಕೊಡದೆ, ಆ ಮುನಿಸಿಪಾಲಿಟಿಯವರು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಅಕ್ರ್ಯಾಯ್ ತೆರಿಗೆ ಸಂಬಂಧದಲ್ಲಿ ಬರೆದ ಕಾಗದವನ್ನು ನೋಡಿ ಅವರಿಗೆ ಏನು ದುಡ್ಡು ಕೊಡಬೇಕು ಎನ್ನುವ ವಿಷಯದಲ್ಲಿ ವಿಚಾರ ವಿನಮಯ ಮಾಡದೆ ಆ ಮುನಿಸಿಪಾಲಿಟಿಯವರನ್ನು ಹೆದರಿಸಿ ನಿಮಗೆ ಕರೆಂಟ್ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಹೇಳಿ ಅವರಿಂದ ವಿದ್ಯುಚ್ಛಕ್ತಿ ಬೋರ್ಡಿನವರು ದುಡ್ಡನ್ನು ತೆಗೆದುಕೊಂಡಿದ್ದಾರೆ. ವಿದ್ಯುಚ್ಛಕ್ತಿ ಬೋರ್ಡಿನವರು ತಮಗೆ ಬರುವ ದುಡ್ಡನ್ನು ನೋಡುತ್ತಾಗೆಯೇ ಹೊರತು ಅವರು ಕೊಡಬೇಕಾದ ದುಡ್ಡನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಅವರಿಗೆ ಕೊಡಬೇಕಾದ ದುಡ್ಡನ್ನು ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ಕೊಡುವುದಕ್ಕೂ ಅವಕಾಶವಿಲ್ಲದಂತಾಗಿದೆ.

ಇನ್ನೊಂದು ವಿಷಯ. ವಿದ್ಯುಚ್ಛಕ್ತಿಯನ್ನು ಯಾರು ಯಾರು ಉಪಯೋಗಿಸುತ್ತಾರೆಯೋ ಅವರಿಗೆ ಪ್ರತಿ ತಿಂಗಳು ಸರಿಯಾಗಿ ಬಿಲ್ಲುಗಳನ್ನು ವಿದ್ಯುಚ್ಛಕ್ತಿ ಬೋರ್ಡಿನ ಆಫೀಸಿನವರು ಕಳುಹಿಸಿಕೊಡುತ್ತಿಲ್ಲ. ಮಂತ್ರಿಗಳ ಮನೆಗಳಿಗೇನಾದರೂ ತಿಂಗಳು ತಿಂಗಳು ಸರಿಯಾಗಿ ಎಲೆಕ್ಟ್ರಿಸಿಟಿ ಚಾರ್ಜಿನ ಬಿಲ್ಲುಗಳು ಹೋಗುತ್ತದೆಯೋ ಏನೋ ಗೊತ್ತಿಲ್ಲ. ನಮಗಂತೂ ವಿದ್ಯುಚ್ಛಕ್ತಿ ಚಾರ್ಜಿನ ಬಿಲ್ಲುಗಳು ತಿಂಗಳು ತಿಂಗಳು ಸರಿಯಾಗಿ ಬರುತ್ತಿಲ್ಲ. ಬಹುಶಃ ಮಂತ್ರಿಗಳು ವಿದ್ಯುಚ್ಛಕ್ತಿ ಚಾರ್ಜನ್ನು ಕೊಡಬೇಕಾಗಿಲ್ಲವೆಂದು ಕಾಣುತ್ತದೆ. ಯಾವಾಗ ನಮಗೆ ಸರಿಯಾಗಿ ಬಿಲ್ಲುಗಳು ಬರುವುದಿಲ್ಲವೋ ಆಗ ನಮಗೆ ಎಷ್ಟು ದುಡ್ಡು ಕಟ್ಟಬೇಕೆಂಬುದು ಗೊತ್ತೇ ಆಗುವುದಿಲ್ಲ. ನಾವು ಎಷ್ಟು ದುಡ್ಡು ಕಟ್ಟಬೇಕೆಂದು ಆಫೀಸಿನಲ್ಲಿ ಹೋಗಿ ಕೇಳಬೇಕು. ಕೆಲವು ಸಂದರ್ಭಗಳಲ್ಲಿ ನಾವು ಕೊಡಬೇಕಾದ ವಿದ್ಯುಚ್ಛಕ್ತಿ ಚಾರ್ಜನ್ನು ಕಟ್ಟಿದ್ದರೂ ಸಹ ಅದು ಲೆಡ್ಜರ್ ಪುಸ್ತಕದಲ್ಲಿ ಲೆಕ್ಕಕ್ಕೇ ಅಡ್ಜಸ್ಟೇ ಆಗಿರುವುದಿಲ್ಲ. ಮುಂದಿನ ತಿಂಗಳು ಬಿಲ್ ಬರುವಾಗ ಅದಕ್ಕೆ ಇಂಟರೆಸ್ಟ್ ಆ ಚಾರ್ಜ್ ಈ ಚಾರ್ಜು ಎಲ್ಲವನ್ನೂ ಸೇರಿಸಿ ಬಿಲ್ಲನ್ನು ನಮಗೆ ಕಳುಹಿಸುತ್ತಾರೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು ನಮ್ಮ ಮೈಸೂರಿನಲ್ಲಿ ಜೋರಾಗಿ ಗಾಳಿಬೀಸಿದರೆ ದೀಪಗಳೆಲ್ಲಾ ಆರಿಹೋಗುತ್ತವೆ. ಆಬಗ್ಗೆ ಎಲೆಕ್ಟ್ರಿಕ್ ಆಫೀಸಿಗೆ ಕಂಪ್ಲೆಂಟ್ ಕೊಟ್ಟರೆ ಎರಡು ಮೂರು ದಿವಸಗಳಾದರೂ ಅಲ್ಲಿಗೆ ಬಂದು ಅದನ್ನು ನೋಡಿ ಸರಿಮಾಡುವವರೇ ಇಲ್ಲ. ಸ್ವಲ್ಪ ಗಾಳಿ ಮಳೆ ಬಂದರೆ ಲೂಜ್ ಕಾಂಟ್ಯಾಕ್ಟ್ ಬಂದು ದೀಪಗಳು ಆರಿ ಹೋಗುತ್ತವೆ. ಇದನ್ನು ಸಹ ಸರಿಮಾಡುವವರು ಗತಿಯಿಲ್ಲ ಎಂದರೆ ಹೇಗೆ?

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ರೈತರಿಗೆ ಮಾಡುತ್ತಿರುವ ಉಪಕಾರವಂತೂ ಹೇಳತೀರದು. ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ರೈತರು ವಿದ್ಯುಚ್ಛಕ್ತಿ ಬೋರ್ಡಿಗೆ ಅರ್ಜಿಗಳನ್ನು ಹಾಕಿಕೊಂಡು 2-3 ವರ್ಷಗಳಾದರೂ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿಲ್ಲ. ನಮಗೆ ವೈರ್ ಇಲ್ಲ ಟ್ರಾನ್ಸ್‌ಫಾರ್‌ಮರ್ ಇಲ್ಲ, ಪೋಲ್ಸ್ ಇಲ್ಲ ಎಂದು ಹೇಳುತ್ತಾರೆ. ಪಂಪು ಸೆಟ್ಟುಗಳನ್ನು ಒದಗಿಸಿ ಎಂದು ಕೇಳಿದರೆ ಪಂಪುಸೆಟ್ಟುಗಳಿಲ್ಲ. ಕಂಪನಿಗೆ ಬರದಿದ್ದೇವೆ ಇನ್ನೂ ಬಂದಿಲ್ಲ ಎಂದು ಹೇಳುತ್ತಾರೆ. ರೈತರಿಗೆ ಪಂಪುಸೆಟ್ಟುಗಳನ್ನು ಸರಿಯಾಗಿ ಸಪ್ಲೈ ಮಾಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಂತೂ ಬಾವಿಯಲ್ಲಿ ನೀರನ್ನು ತೆಗೆಯುವುದು ಬಹಳ ಕಷ್ಟ. ಪಂಪುಸೆಟ್ಟು ಮತ್ತು ಪವರ್ ಇಲ್ಲದೆ ಇದ್ದರೆ ಅಲ್ಲಿ ಬಾವಿಯಿಂದ ನೀರನ್ನು ಮೇಲಕ್ಕೆ ತೆಗೆಯುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಇದರಿಂದಲೇ ಗೊತ್ತಾಗುತ್ತದೆ. ಇವರು ರೈತರಿಗೆ ಎಷ್ಟರಮಟ್ಟಿನ ಉಪಕಾರವನ್ನು ಮಾಡಿದ್ದಾರೆ ಎಂಬುದು ಕೆಲವು ಸಂದರ್ಭಗಳಲ್ಲಿ ಯಾವುದೊ ಸ್ಟಾಂಡರ್ಡ್ ಇಲ್ಲದೆ ಇರತಕ್ಕ ಜ್ಯೋತಿ, ಕಿರ್ಲೋಸ್ಕರ್ ಮುಂತಾದ ಕೆಲಸಕ್ಕೆ ಬಾರದ ಪಂಪುಸೆಟ್‌ಗಳನ್ನ ಇಂಡೆಂಟ್‌ಮಾಡಿ ಅವುಗಳನ್ನು ತರಿಸಿ ಅಂಥಾ ಪಂಪುಸೆಟ್ಟುಗಳನ್ನು ತೆಗೆದುಕೊಂಡುಹೋಗಿ ಎಂದು ಜನಗಳಿಗೆ ಹೇಳುತ್ತಾರೆ ಏನೇನೊ ತಂತ್ರ ನಡೆಸುತ್ತಾರೆ ನಮಗೆ ಅದೊಂದು ಅರ್ಥವಾಗುವುದಿಲ್ಲ. ಇವರು ರೈತರಿಗೆ ಸರಿಯಾಗಿ ಅನುಕೂಲ ಮಾಡಿಕೊಡುತ್ತಿಲ್ಲ. ರೈತನಿಗೆ ಎಲೆಕ್ಟ್ರಿಸಿಟಿಬೋರ್ಡಿನವರು ಯಾವರೀತಿ ಅನುಕೂಲವನ್ನು ಒದಗಿಸುತ್ತಿದ್ದಾರೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಅದೇನೆಂದರೆ, ಒಂದು ಪಂಪುಸೆಟ್ಟನ್ನು ಬೆಂಗಳೂರಿನಿಂದ ಮೈಸೂರಿಗೆ ಸಾಗಿಸಲು ರೈತನಿಂದ, 158 ರೂಪಾಯಿ ಚಾರ್ಜ್‌ತೆಗೆದುಕೊಳ್ಳುತ್ತಾರೆ. ರೈತ ಇದನ್ನು ಏತಕ್ಕೆ ಕೊಡಬೇಕು ? ಪಂಪು ಸೆಟ್ಟನ್ನು ಕೊಡುವಸ್ಥಳಕ್ಕೆ ಸಂಬಂಧಪಟ್ಟ ಪಾರ್ಟಿ ಬಂದರೆ ಅಲ್ಲಿಯೇ ಅವರಿಗೆ ಏತಕ್ಕೆ ಅದನ್ನು ಕೊಡಬಾರದು ? 158 ರೂಪಾಯಿಗಳನ್ನು ರೈತನಿಂದ ಏತಕ್ಕೆ ವಸೂಲು ಮಾಡಬೇಕು ? ಅನಕ್ಷರಸ್ಥನಾದ ರೈತನಿಗೆ ಇವರು ಮಾಡಿಕೊಡುವ ಉಪಕಾರ ಇದೇನೇ. ಆಮೇಲೆ ಆ ಪಂಪುಸೆಟ್ಟನ್ನು ಇನ್‌ಸ್ಟಾಲ್ ಮಾಡಬೇಕಾದರೆ ಅದಕ್ಕೆ 500ರೂಪಾಯಿಗಳನ್ನು ಚಾರ್ಜ್‌ಮಾಡುತ್ತಾರೆ. ಅದೇ ಪಂಪುಸೆಟ್ಟನ್ನು ಇನ್‌ಸ್ಟಾಲ್ ಮಾಡುವ ಕೆಲಸವನ್ನು ಕಂಟ್ರಾಕ್ಟರಿಗೆ ವಹಿಸಿದರೆ ಅವರು 200 ರೂಪಾಯಿ ಚಾರ್ಜ್ ಮಾಡುತ್ತಾರೆ. ಆಮೇಲೆ ರೈತರಿಗೆ ಪಂಪುಸೆಟ್ಟು ಹಾಕಿ ಕೊಡುವಾಗ ಅದಕ್ಕೆ ಇನ್‌ಷ್ಯೂರ್ ಮಾಡಿಸಿಕೊಳ್ಳುತ್ತಾರೆ. ಒಂದು ವರ್ಷದಲ್ಲಿಯೇ ಅದು ಏನಾದರೂ ಕೆಟ್ಟುಹೋದರೆ ಅದನ್ನು ರಿಪೇರಿ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಆದರೆ ಒಂದು ವರ್ಷದಲ್ಲಿ ಆ ಪಂಪುಸೆಟ್ಟು ಕೆಟ್ಟುಹೋಗಿ ಯಾರಾದರೂ ಕಂಪ್ಲೇಂಟ್ ಕೊಟ್ಟರೆ ಆ ಕಂಪ್ಲೇಂಟ್ ಅನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಇನ್‌ಷ್ಯೂರ್ ಮಾಡಿಸಿಕೊಂಡಮೇಲೆ ಅದು ಕೆಟ್ಟುಹೋದರೆ ಅದನ್ನು ರಿಪೇರಿ ಮಾಡಿಕೊಡಬೇಕಾದ್ದು ಅವರ ಜವಾಬ್ದಾರಿ. ಆದರೆ ಯಾರಾದರೂ ಕಂಪ್ಲೇಂಟ್ ಕೊಟ್ಟರೆ ಅದನ್ನು ಅವರು ತೆಗೆದುಕೊಳ್ಳುವುದಿಲ್ಲ. ಕೆಟ್ಟುಹೋದ ಪಂಪುಸೆಟ್ಟನ್ನು ರಿಪೇರಿ ಮಾಡಿಕೊಡುವುದಿಲ್ಲ. ಇಂಥಾ ಒಂದು ಪರಿಸ್ಥಿತಿ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಉಂಟಾಗಿದೆ.

ಇನ್ನು ಇವರು ರೈತರಿಗೆ ಒದಗಿಸಿರುವ ಪಂಪು ಸೆಟ್ಟುಗಳಿಗೆ ಹಾಕಿರುವಂತಹ ಮೀಟರುಗಳು ಹೇಗಿವೆಯೆಂದರೆ ಅವು ಲೊಡ್ಡುಮೀಟರುಗಳು. ಅವು ಒಂದು ದಿವಸಕ್ಕೆ 300-400 ಯೂನಿಟ್ ಪ್ರಕಾರ ಓಡುತ್ತವೆ. ಅವುಗಳನ್ನು ಸರಿಮಾಡಿಕೊಡಿ ಅಂದರೆ ಅದನ್ನು ಕೇಳುವವರೇ ಗತಿಯಿಲ್ಲ. 300-400 ಯೂನೀಟ್‌ಗಳಿಗೆ ರೈತ ದುಡ್ಡು ಕೊಡಬೇಕಾದರೆ ಅಯ್ಯೋ ಏತಕ್ಕೆ ಇಷ್ಟೊಂದು ದುಡ್ಡು ಕೊಡಬೇಕಲ್ಲ ಎಂದು ಪೇಚಾಡುತ್ತಾನೆ. ಇದರ ಬಗ್ಗೆ ನಿಗಾಕೊಡುವವರೇ ಇಲ್ಲ. ಬಾಯಲ್ಲಿ ಮಾತ್ರ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ರೈತನಿಗೆ ಬೇಕಾದಷ್ಟು ಸಹಾಯವನ್ನು ಮಾಡುತ್ತೇವೆ ಎಂದು ಹೇಳುತ್ತಾರೆ ಆದರೆ ಕಾರ್ಯತಃ ರೈತನಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡುತ್ತಿಲ್ಲ. ಸುಮ್ಮನೆ ಬಾಯಲ್ಲಿ ಅಯ್ಯೋ ಪಾಪ ರೈತ ಎಂದು ರೈತನ ವಿಷಯದಲ್ಲಿ ಬರೀ ಲಿಪ್ ಸಿಂಪತಿ ತೋರಿಸಿದರೆ ಏನೂ ಪ್ರಯೋಜನವಿಲ್ಲ. ಅವನಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಈ ಎಲೆಕ್ಟ್ರಿಸಿಟಿಬೋರ್ಡಿನಲ್ಲಿರತಕ್ಕ ಕೆಳದರ್ಜೆ ನೌಕರರ ಟ್ರ್ಯಾನ್ಸ್‌ಫರ್ ವಿಷಯದಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಕೆಲವು ಆಫೀಸರುಗಳು ಸುಮಾರು 25 ವರ್ಷಗಳಿಂದ ಒಂದೇ ಆಫೀಸಿನಲ್ಲಿದ್ದಾರೆ. ಈಗ ಯಾರಾದರೂ ಒಬ್ಬರು ನೌಕರರು ಮುನಿರಾಬಾದಿನಲ್ಲಿ 4-6 ವರ್ಷ

ಗಳಿಂದ ಕೆಲಸ ಮಾಡುತ್ತಿದ್ದು ಅಂಥವರನ್ನು ಹಳೆಯ ಮೈಸೂರಿಗೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಕೇಳಿದರೆ ನಾವು ಹೇಳುವ ಮಾತು ಅವರ ಕಿವಿಯ ಒಳಗೇ ಬೀಳುವುದಿಲ್ಲ. ಅವರನ್ನು ಏಕೆ ಹಾಕಬಾರದು ? ಈ ದೊಡ್ಡ ದೊಡ್ಡ ಆಫೀಸರುಗಳು ಇಲ್ಲಿಯೇ ಇದ್ದುಕೊಂಡು, ಸಾವಿರಾರು ಸಂಬಳ ತೆಗೆದುಕೊಂಡು ಅವರಿಗೆ ಅವರ ಕೆಳಗಡೆ ನೌಕರರ ಕಷ್ಟ ಅರ್ಥವಾಗುವುದೇ ಇಲ್ಲ. ಅವರು ಬೇಕಾದ ಹಾಗೆ ಭೋಗದಲ್ಲಿರುತ್ತಾರೆ. ಅಜ್ಜ ದುಡಿದದ್ದೆಲ್ಲಾ ಮೊಮ್ಮಗಿನ ಉಡಿ ದಾರಕ್ಕೆ ಎಂಬ ಗಾದೆ ಹಾಗೆ ಎಲ್ಲ ಸೌಕರ್ಯಗಳೂ ಅವರಿಗೇ ಮೀಸಲಾಗಿವೆ. ಈ ಬಡನೌಕರರು 6–8 ವರ್ಷ ಒಂದು ಕಡೆ ಇದ್ದಮೇಲೆ, ಅವರಿಗೆ ಕೇಳಿದ ಕಡೆಗೆ ಏಕೆ ಟ್ರಾನ್ಸ್‌ಫರ್ ಮಾಡಬಾರದು ? ಅವರೆಗೆ ಏಕೆ ರಿಲೀಫ್ ಕೊಡಬಾರದು ? ಈ ಬೋರ್ಡ್ ಆಫೀಸರ್ಸ್‌ಗೆ ಹ್ಯುಮನಿಟೇರಿಯನ್ ಕನ್ಸಿಡ ರೇಶನ್ಸ್ ಬೇಡವೆ ? ಅವರಿಗೆ ಏನಾಗಿದೆಯೋ ನಮಗೆ ಅರ್ಥವಾಗುತ್ತಾ ಇಲ್ಲ.

ಕೆಲವು ಆಫೀಸರುಗಳ ಹೆಂಡತಿಯರು ಕೆಲಸದಲ್ಲಿರುತ್ತಾರೆ. ಅಂಥವರಲ್ಲಿ ಕೆಲವರು ಗಂಡಹೆಂಡತಿ ಇಬ್ಬರೂ ಒಂದೇ ಕಡೆ ಇರುತ್ತಾರೆ. ಗಂಡಹೆಂಡಿರಿಬ್ಬರೂ ಕೆಲಸದಲ್ಲಿದ್ದರೆ, ಸಾಧ್ಯವಾದ ಮಟ್ಟಿಗೆ ಇಬ್ಬರನ್ನೂ ಒಂದೇ ಊರಿಗೆ ಹಾಕಬೇಕೆಂದು ನಿಯಮವಿದೆ. ಈ ವಿಷಯದಲ್ಲಿ ಕೂಡ ತಮಗೆ ಬೇಕಾ ದವರಿಗೆ, ಒಂದೇ ಕಡೆ ಇಡುತ್ತಾರೆ, ಬೇಡದವರಿಗೆ ಬೇರೆ ಬೇರೆ ಕಡೆ ಹಾಕುತ್ತಾರೆ. ಇಬ್ಬರೂ ಒಂದೇ ಕಡೆ ಇದ್ದರೆ ಮನೆಮಠ ಕಟ್ಟಿಕೊಂಡು ನೆಮ್ಮದಿಯಿಂದ ಇರಬಹುದು. ಸರಕಾರಿ ನೌಕರಿಗೆ ಸೇರಿ ಕೊಂಡದ್ದೇ ತಪ್ಪೆ ಸರ್ವಿಸ್ಸಿನ ಕೊನೆಗಾಲದೊಳಗಾದರೂ ನೌಕರರಿಗೆ ನೆಮ್ಮದಿ ಇಲ್ಲದೆಹೋದರೆ ಅವರ ಪಾಡು ಬಹಳ ಕಷ್ಟ. ಗ್ರಹಚಾರವಶಾತ್ ಸರಕಾರಿ ನೌಕರಿ ಸೇರುತ್ತಾರೆ. ಅವರಿಗೆ ವರ್ಗ ಮುಂತಾದ ಸಣ್ಣ ಸಣ್ಣ ಬೇಡಿಕೆಗಳಲ್ಲಿ ಸೌಕರ್ಯಗಳನ್ನು ಏಕೆ ಒದಗಿಸಿಕೊಡುತ್ತಿಲ್ಲವೊ ನನಗೆ ಅರ್ಥ ವಾಗುತ್ತಿಲ್ಲ.

ಅಗ್ರಿಕಲ್ಚರಿಸ್ಟರುಗಳ **ಬಗ್ಗೆ** ಒಂದೇ ಒಂದು ಸಲಹೆ ಕೊಡುತ್ತಾ ಇದ್ದೇನೆ. ಶ್ರೀ ಸೂರ್ಯ ನಾರಾಯಣರಾಯರು ಎಲ್ಲಾ ಕಡೆಗೂ ವಿದ್ಯುಚ್ಛಕ್ತಿ ಕೊಡುವಾಗ, ಆದರ ದರವನ್ನು ಜಾಸ್ತಿ ಮಾಡಿ ದ್ದಾರೆಂಬ ಬಗ್ಗೆ ಹೇಳಿದರು. ಜಾಸ್ತಿ ಕೊಡುವುದಕ್ಕೆ ಇವರು ವ್ಯವಸಾಯಗಾರರಿಗೆ ಮಾಡಿಕೊಟ್ಟಿರುವ ಅನುಕೂಲಗಳೇನು ಎನ್ನುವುದನ್ನು ನೋಡಬೇಕು. ಆ ತರಹ ಅವರ ಹಾಗೆ ಹೊಟ್ಟೆ ತುಂಬಿದ್ದರೆ ಕೊಡಬಹುದು. ಅಥವಾ ಕೆರೆ ಕಾಲುವೆ ನೌಕರ್ಯವಿದ್ದರೆ ಯೋಚನೆ ಮಾಡಬಹುದು. ಮದರಾಸಿನಲ್ಲಿ ಜಾಸ್ತಿ ಕೊಡುತ್ತಿದ್ದರೆ ಅಲ್ಲಿ ಜಾಸ್ತಿ ಅನುಕೂಲಗಳನ್ನು ಒದಗಿಸಿರಬಹುದು ಅಲ್ಲಿ ಜನಗಳಿಗೆ ಜಾಸ್ತಿ ವರಮಾನ ಇರಬಹುದು. ಇಲ್ಲಿ ಅನುಕೂಲವೂ ಇಲ್ಲ ಇನ್‌ಕಮ್ಮು ಇಲ್ಲ ಬರೀ ಕೊಡಿ, ಕೊಡಿ, ಕೊಡಿ ಅನ್ನುತ್ತಿದ್ದಾರೆಯೇ ಹೊರತು, ಅಂಥ ಉಪಕಾರವನ್ನೇನೂ ಮಾಡಿಲ್ಲ. ದಯೆಯಿಟ್ಟು, ಈ ಅಗ್ರಿ ಕಲ್ಚರಿಸ್ಟುಗಳಿಗೆ, ನಿಮಗೆ ಫುಡ್ ಬೆಳೆಯುವ ಅಗ್ರಿಕಲ್ಚರಿಸ್ಟುಗಳಿಗೆ, ಸಬ್ಸಿಡೈಸ್ಡ್ ರೇಟಿನಲ್ಲಿ ಪವರ್ ಸಪ್ಲೈ ಮಾಡಿಕೊಡಬೇಕು. ಈ ಎಲೆಕ್ಟ್ರಿಸಿಟಿ ಬೋರ್ಡನ್ನು ಸರಕಾರವೇ ವಾಪಸ್ಸು ವಹಿಸಿಕೊಂಡು, ಅದನ್ನು ಸರಿಯಾದ ಚೆಕ್ಕಿನಲ್ಲಿ ಇಟ್ಟುಕೊಳ್ಳಬೇಕು.

ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸು ತ್ತೇನೆ.

Mr. SPEAKER.—May I know what time the Hon'ble Minister would require to reply ?

Sri VEERENDRA PATIL.—About 1½ hours.

Mr. SPEAKER.—I will allow the debate to go on to-day. Tomorrow there will be reply.

Now Sri R. M. Desai will speak.

Sri R. M. DESAI (Bilgi).—Sir, I would like to make some observations on the budget of the Electricity Board kept before us. Looking to the figures which have been given to us on the revenue side as well as in the expenditure side, we see that it is on the increase side only. Though Mysore was one of the pioneer States in the production of electricty and was a matter of boast now due to certain cirumstances we were lagging behind. Thanks to Sharavathi which not only will be giving power we require but will be able to supply to other States adding to the income of the State. Nature have been kind enough that we are going to have more and more

(Sri R. M. Desai)

hydel schemes which must be investigated and brought into effect. Let us try to complete them early and let us hope for better electricity production.

Looking to the figures side, we see our budget is practically on the minus side for all the years to come. No doubt in a developing economy we will have to bear the brunt of it. We see the Electricity Board making all efforts to march forward in all respects. But the magnitude of the work is so much and the development side is so much that we have to face all these things and understand the difficulties for the Board. We compliment the Board far having undertaken all the trouble and to do their best so far. But still there is a lot to be done.

Regarding the tariff rates is concerned I would like to state, of course the Finance Minister has time and again said that ours is lowest. I for one would say that along with production to such high pitch, the tariff rates also must be brought down. Otherwise there will be no incentive for the users. If we compare the rates we were paying formerly and the increased rate, I think we are paying three to four times more. That is discouraging factor to use electricity.

Mr. SPEAKER.—The Hon'ble Minister for Finance feels that in the neighbouring States it is still more and ours is still lower. Therefore if the grid has to come-why not enhance the rate ?

Sri B. D. JATTI.—Recently the Government of India appointed a committee and they have given a report. They have also recommended that we will have to enhance the rate and it should on par with the neigbouring States.

Sri R. M. DESAI.—Anyway I wish to differ in that view. Looking to the production we will be having in future, I think we will not be faced with the problem as to how it has to be Consumed properly. In that way to make it more consumed, the rates must be reduced. More the quantity we produce and consume, profit also will be proportionately more. We should not depend on increasing the tariff rates as envisaged here. I sincerely request the Government to consider that aspect and not to rise the tariff any more. To encourage the agriculturists some sort of subsidies must be thought of. Instead of paying our money to the foreign countries we must pay to our own kith and kin and production will increase. It is worthwhile to consider this aspect.

Regarding the loans borrowed by the Board, every year we draw loans to pay interest of the Board only. I have observed that borrowed money goes to pay the interests of the old loans. Why not the loans be made long-term loans or the interest portion of it reduced to be paid so that borrowed money at least could be used by the Board for better purposes. That is my suggestion and it should be worthwhile thinking.

Mr. SPEAKER.—The Board, when it was constituted was valued perhaps very roughly. It is an old drawn balance brought forward with regard to stocks and book values and it was made over as if it is a new stuff.

Sri R. M. DESAI.—That is also an item where lot of old stuff has been taken into account.

Sri B. D. JATTI.—Is he referring to that item or loans which are taken for the development ?

Sri R. M. DESAI.—Even a large portion of the amount drawn by way of loans goes towards payment of interest. In that case, I see no reason why the loans should not be made long-term. I do not know what the Hon'ble Finance Minister thinks about it.

Sri B. D. JATTI.—Whenever we raise loans, we will have to pay the rate of interest which is prescribed by the Reserve Bank and the Government of India. If we have to pay high rate of interest, how can we pay to the Board at a low rate of interest, which is a business concern and an autonomous body ?

Sri R. M. DESAI.—I am just making a suggestion. Let them chalk out a programme and find out some way in consultation with the Reserve Bank of India. Technical difficulties should not be there. That is my suggestion.

As far as we can see, there is a lot to be done by the Board. The work of the Board is very slow on account of many matters. Of course, the staff is inadequate, pay-scales are not so attractive and there is no encouragement to the officials who have served ten to fifteen years by way of promotion, confirmation, etc. Increase of staff is the main thing which is governing the three aspects. The present position is, enormous output is coming now and the development side also is going on side by side. These are some of the factors which call for increase in staff. If we see to the Budget-heads divisionwise, we see that meagre staff is provided for the areas to be developed. Lot of schemes have to be investigated and so many lines have to be drawn up, and therefore, the staff has to be increased. This aspect should be thought over very well. I understand that the present head of the Board is of the opinion that the staff position is adequate.

Mr. SPEAKER.—Despite this expansion !

Sri R. M. DESAI.—It is very discouraging. I do not know what made him to say so. This sort of a statement by a responsible Head of the present Board is rather very discouraging to us. I might be wrong in saying so ; I do not know. In regard to the development side of it, the main priority should be given to agriculture according to us on our side at least. Old Mysore area, of course, has been developed including rural areas. We are looking forward for electricity not to light our homes, but to light our farms and installation of pump sets. In that respect, I feel that the present Electricity Board has erred somewhere. I want to quote an instance. In Belgaum District there is a village called Mudalgi, which has got six to seven hundred wells. Nearly two to three hundred diesel sets are working there. Transmission line has been taken through that village to some of the weaving centres like Bannahatti, Rabahani, etc. But, they have utterly neglected

(SRI R. M. DESAI)

agriculture there. People are unable to get power for agricultural purposes. When we are crying and pleading that agriculture must be given the highest priority, what is the action taken by the Electricity Board to supply power for agricultural purposes? Agriculturists are clamouring for power. This is one of the gravest mistake committed by the Board in that area. Such a thing should not happen in future at least. Let us industrialise the Cities, let us give them electricity. It does not mean that agriculture alone should get priority. Bangalore City for instance, though it has the biggest amount of power, still we have to supplement because it is a fast developing city with all the modern industries. But, first priority must be given to agriculturists. There are many difficulties for agriculturists in getting power supply now. We have observed that there is lot of delay even though the Board has taken deposit amounts nearly three to four years back and though they are on the waiting list from a long time, they have not been supplied power. Some technical difficulty will arise everywhere. The Engineer will have to go to the spot and survey. These are procedural matters, which take lot of time. This should be given a stop.

Coming to Irrigation Pump sets, there are about thirty thousand and odd pump sets working now in the State, whereas if we look to Madras-because our Finance Minister always says that he follows the Madras pattern—there they supply 1,30,000 sets every year. We have got only thirty thousand and odd all these years to come. I feel that if we go ahead in view of our production capacity when Sharavathi project is going to come, I don't think any amount of planning will fall short.

MR. SPEAKER.—You are suggesting that it must take 1,30,000 pump sets!

SRI B. D. JATTI.—Where is finance, Sir?

MR. SPEAKER.—Finance will come if effort is made. More pump sets means more income to the Government.

SRI R. M. DESAI.—That is what I mean, Sir. When we are going ahead with these plans of electrifying our farms and supplying pump sets, we must think, side by side, of providing some Service Stations. At least at the Divisional level there must be a small Service Station so that we can go to them for any help. We can even keep some spare pump sets at Service Stations to supplement sets which go out of order. Now we see Automobile Service Stations for servicing on every road. Likewise Pump Servicing Stations should come up well. This is very important to run these pump sets in an effective manner, and this should be there at least at the divisional level to start with. I do not know why the Electricity Board should not think of producing motors for themselves? Why should they not prepare a programme?

MR. SPEAKER.—Does the Member suggest that there is not a single company producing pump-sets in Mysore State?

SRI R. M. DESAI.—There are, but they must be encouraged. More pump-sets will go very handy for us. I have got one thing to say about these pump sets. The old Board has committed a blunder in this behalf. The Central Government had given us some amount for purchase of pump sets. When the amount was about to be lapsed, all of a sudden the Board purchased pumpsets and motors costing about Rs. 80 lakhs. Many of them do not work at all and the agriculturists are forced to go in for these sets. This is one of the greatest blunders they have committed. Simply because the amount was going to be lapsed, they have purchased rubbish materials. These pump sets and motors are in stores, but they are not worthwhile to be handled by ignorant agriculturists. They are not fool.proof either. Such things should not happen at least in future. The cultivator must have the free choice to choose his own pump-set and motor. Now the Board is insisting that a purticular make should be lifted. That should not happen. That is my sincere request.

5-00 P.M.

MR. SPEAKER.—That is a matter which can be co-ordinated. Perhaps after a review of the situation is made, certain other persons who are in need of them may be satisfied.

SRI R. M. DESAI.—There is plenty of flowing water potential in our area. A number of rivers are flowing in our State and we must make use of river water as much as possible.

MR. SPEAKER—In Madras, number of rivers that is flowing are very few and they have tapped sub-soil water to the maximum.

SRI R. M. DESAI.—In Bijapur District we have got five rivers. Instead of taking Alamatti and submerging rich soil, I take this opportunity to request them to instal thousands of pumpsets ; then our area will be not only the grannery of Karnatak but we can supply the whole country. We want two million tons more of production of foodgrains and one million tons of fruits and vegetables. These are all targets which are kept in front of us. So, I request the Board to explore the possibilities and see that small lines which are proposed to be drawn latter on, may also be drawn along with the main line of 100 KV so that no sooner the power comes to receiving Station, and distribution station, they must be able to switch on to small lines also. There should be a co-ordinated effort and proper planning and proper method of handling these things. This will go a long way in increasing food production.

† ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ರಾಜ್ಯದ ವಿದ್ಯುತ್‌ಚಕ್ತಿ ಮಂಡಲಿಯ ಆಯವ್ಯಯ ಅಂದಾಜಿನಲ್ಲಿರುವ ಲೋಪದೋಷಗಳನ್ನು ಈಗಾಗಲೇ ಮಾತನಾಡಿದ ಸ್ನೇಹಿತರು ಸಾಕಷ್ಟು ಎತ್ತಿ ತೋರಿಸಿದ್ದಾರೆ. ನಾನಾದರೂ ಕೂಡ ವಿದ್ಯುತ್‌ಚಕ್ತಿ ಮಂಡಲಿಯು ಲಾಭದಾಯಕವಾಗಿ ಕೆಲಸ ಮಾಡಲಿಲ್ಲ ಎನ್ನುವುದಕ್ಕೆ ಒಂದೆರಡು ಕಾರಣಗಳನ್ನು ಹೇಳಬಯುಸುತ್ತೇನೆ. ಮೊದಲನೆಯದಾಗಿ ಪವರ್ ಪ್ರೊಜೆಕ್ಟ್ಸ್ ನಿರ್ಮಿಸತಕ್ಕಂಥಾದ್ದು ಸರಕಾರ. ಅದನ್ನು ವಿತರಣೆ ಮಾಡತಕ್ಕ ಕೆಲಸ ವಿದ್ಯುತ್‌ಚಕ್ತಿ ಮಂಡಲಿಯದು ಆಗಿದೆ. ವಿತರಣೆ ಮಾಡತಕ್ಕ ಕೆಲಸದಲ್ಲಿ

(ಶ್ರೀ ಸಿದ್ದಯ್ಯ ಕಾಶೀಮಠ್)

ದೊಡ್ಡ ಲೋಪ ದೋಷಗಳಿವೆ. ಪವರ್ ಪ್ರೊಜೆಕ್ಟಿನಿಂದ ನಿರ್ಮಾಣವಾಗತಕ್ಕ ವಿದ್ಯುತ್‌ನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡಲು ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕೆಂದು ಒಂದು ಆದೇಶ ಕೊಟ್ಟರೆ ಈ ಕಾರ್ಯ ನಿರ್ವಹಣೆ ಕೈಗೊಳ್ಳಬಹುದು ಎಂದು ಹೇಳಬಯಸುತ್ತೇನೆ. ಈಗಾಗಲೇ ವಿದ್ಯುತ್ ಮಂಡಲಿಯಲ್ಲಿ ಒಬ್ಬರು ಕನ್‌ಸ್ಟ್ರಕ್ಷನ್ ಇಂಜಿನಿಯರ್, ಒಬ್ಬರು ಚೀಫ್ ಇಂಜಿನಿಯರ್, ವಿತರಣೆಗೆ ಒಬ್ಬ ಇಂಜಿನಿಯರ್ ಇದ್ದಾರೆ. ಆದುದರಿಂದ ಈ ಕೆಲಸ ಕಷ್ಟದಾಯಕವಾಗುವುದಿಲ್ಲ. ಇದಲ್ಲದೆ ವಿದ್ಯುತ್‌ಚಕ್ತಿ ಮಂಡಲಿಯು ಕಳೆದ ಎಂಟು ವರ್ಷಗಳಿಂದ ಪಬ್ಲಿಕ್‌ನಿಂದ ಸಾಲ ತೆಗೆದುಕೊಂಡು ಅದಕ್ಕೆ ಹೆಚ್ಚು ಬಡ್ಡಿ ಕೊಟ್ಟು ಆ ಹಣವನ್ನು ಬ್ಯಾಂಕ್‌ನಲ್ಲಿ ಇಡುವುದನ್ನು ಮೊಟ್ಟ ಮೊದಲು ಕೈಬಿಡಬೇಕು ಎಂದು ಹೇಳುತ್ತೇನೆ. ಪಬ್ಲಿಕ್‌ನಿಂದ ಸಾಲ ತೆಗೆದುಕೊಂಡು ಹಣವನ್ನು ಕೂಡಲೆ ಅಭಿವೃದ್ಧಿಕಾರ್ಯಗಳಿಗೆ ಉಪಯೋಗಿಸುವ ಹಾಗೆ ಸಹಾಯ ಮಾಡುವುದಾದರೆ ಅನೇಕ ಕುಂದುಕೊರತೆಗಳು ಕಡಮೆಯಾಗಬಹುದು ಎಂದು ನಾನು ಹೇಳುತ್ತೇನೆ.

Mr. SPEAKER.—Would the Hon'ble Member refer to page 9. Details of orders placed during the Third and Fourth Plan period are furnished. During 1961-62 they had placed Rs. 767 lakhs worth of orders. Instead of having that amount in the current accout, it is put in deposit.

Sri SIDDIAH KASIMATH.—They are taking at the rate of 4½ per cent from the public.

Mr. SPEAKER.—If he compares para 24 and the loans raised in another paragraph, he will find that outstanding orders are more than the amount that was ever held in balance. No President of Electricity Board will place an order unless he has got funds. When the time comes for honouring he order the next night or previous night, they should not think of raising the money. If they should not keep it with local Bank, what should they do with the money ?

Sri SIDDIAH KASIMATH.—One per cent they are losing. That is the problem.

Mr. SPEAKER.—If they do not place orders, they need not raise money. Once they place orders, legal liability is there. Therefore money has to be raised. During the period between the placing of the order and the date of supply, or date of invoice, it is not imprudent to keep the borrowed money in current account because you do not get any interest. If on the other hand you deposit the amount and get 4 or 5 per cent, it will be wise.

Sri SIDDIAH KASIMATH.—That will mean a net saving of 4 per cent.

ಈ ದಿವಸ ಈ ರೀತಿಯಾಗಿ ಒಂದು ಸರಿಯಾದ ರೀತಿಯಲ್ಲಿ ಬೋರ್ಡಿನವರು ವಿಚಾರ ಮಾಡಿಲ್ಲ. ಮುಂದೆ ಇದಕ್ಕೆ ಸಾಕಷ್ಟು ಹಣವನ್ನು ಒದಗಿಸುವುದಕ್ಕೆ ಅವಕಾಶವಿದೆ. ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಈ ನೌಕರರುಗಳಿಗೆ ಸ್ಪೆಷಲ್ ಅಲೋಯೆನ್ಸ್ ಇತ್ಯಾದಿಗಳನ್ನೆಲ್ಲಾ ಕೊಡತಕ್ಕ ಬಗ್ಗೆ ಕಾನೂನನ್ನು ಜಾರಿಗೆ ತರುತ್ತಿರುವಾಗ ಇಲ್ಲಿ ಈರೀತಿ ಮಾಡುತ್ತಿರುವುದು ಶೋಚನೀಯ. ಇಲ್ಲಿ ಇದರಬಗ್ಗೆ ಒಂದು ದೊಡ್ಡ ದುರಂತವೇ ಆಗಿದೆ. ಈಗಾಗಲೇ ಒಬ್ಬ ಮಾನ್ಯ ಸದಸ್ಯರು ಹೇಳಿದಹಾಗೆ ಇಲ್ಲಿಂದ ಒಬ್ಬ ಸಣ್ಣ ನೌಕರನನ್ನು ಬೆಂಗಳೂರಿಂದ ಎತ್ತಿ ಬೀದರಿಗೆ ವರ್ಗಮಾಡುವುದು, ಅಲ್ಲಿಂದ ಒಬ್ಬನನ್ನು ಎತ್ತಿ ಇಲ್ಲಿಗೆ ಹಾಕುವುದು ಇದೆಲ್ಲಾ ನಡೆಯುತ್ತಿದೆ. ಆದಷ್ಟು ಇದನ್ನು ಕಡಮೆ ಮಾಡಬೇಕು. ಸಾಮಾನ್ಯವಾಗಿ ಅಲ್ಲಲ್ಲಿಯ ಜನರು ಅಲ್ಲಲ್ಲೇ ಇರುವಂತೆ ಒಂದು ವ್ಯವಸ್ಥೆ ಮಾಡಬೇಕಾದ್ದು ಯೋಗ್ಯವೆಂದು ಹೇಳುತ್ತೇನೆ. ಈ ಪ್ಯಾದೆಗಳಿಗೆ ಕೊಡತಕ್ಕ ಕೂಲಿ ಬಹಳ ಕಡಮೆ. ಇದನ್ನು ಬೇಗ ಸರಿಪಡಿಸಬೇಕು. ಅದಕ್ಕಾಗಿ ಇವರೆಲ್ಲರ ಸಂಬಳಸಾರಿಗೆಗಳನ್ನು ಆದಷ್ಟು ಬೇಗ ರಿವೈಜ್‌ಮಾಡಬೇಕೆಂದು

ಹೇಳುತ್ತೇನೆ. ಇದಕ್ಕೆ ಒಂದು ಸಮಿತಿಯನ್ನಾದರೂ ರಚಿಸಲೇ ಬೇಕು, ತಪ್ಪಿದರೆ ಇಲಾಖೆಯ ಅಧಿಕಾರಿಗಳನ್ನೇ ಸೇರಿಸಿ ಒಂದು ಕಮಿಟಿಯನ್ನು ಮಾಡಿ ಸಂಬಳ ಸಾರಿಗೆಗಳನ್ನು ರಿವೈಜ್‌ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತ ವ್ಯವಸಾಯೋದ್ಯಮಗಳಿಗೂ ಮತ್ತು ಸಣ್ಣಪುಟ್ಟ ಕೈಗಾರಿಕೆಗಳಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡದೆ ಅವುಗಳೆಲ್ಲ ಕಳೆದ 8-10 ವರ್ಷಗಳಿಂದ ಬಹಳ ಹಿಂದೆ ಬಿದ್ದಿವೆ. ಇದರಿಂದ ರಾಜ್ಯ ಸರ್ಕಾರಕ್ಕೆ ಬಹಳ ನಷ್ಟವುಆಗಿದೆ. ಅನೇಕರು. ವ್ಯವಸಾಯಕ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಕೇಳುತ್ತಿದ್ದಾರೆ. ಅವರ ಬೇಡಿಕೆ ಈಡೇರುತ್ತಿಲ್ಲ. ನಮ್ಮಲ್ಲಿ ಇತ್ತೀಚೆಗೆ ಮುನಿರಾಬಾದ್ ಮತ್ತು ಶರಾವತಿಯಲ್ಲಿ ಪವರನ್ನು ಉತ್ಪಾದನೆಮಾಡುವುದಕ್ಕೆ ಪ್ರಾರಂಭವಾದಾಗಿನಿಂದ ಪವರನ್ನು ಬಳಸಲು ಸಾಕಷ್ಟು ಅವಕಾಶಮಾಡಿಕೊಳ್ಳದೆ ಇದ್ದಲ್ಲಿ ನಮಗೆ ಬಹಳ ಲುಕ್ಸಾನಾಗುವುದು. ಈ ವರ್ಷದ ಏಪ್ರಿಲ್ ನಂತರ ಇನ್ನೂ ಹೆಚ್ಚಿನ ಪವರನ್ನು ಸರಬರಾಯಿ ಮಾಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ಇದಕ್ಕೆ ತಕ್ಕಂತೆ ನಮ್ಮಲ್ಲಿ ಸಾಕಷ್ಟು ಸಲಕರಣೆಗಳಿಲ್ಲ. ನಮ್ಮ ಪಕ್ಕದರಾಜ್ಯವಾದ ಮದ್ರಾಸಿನಲ್ಲಿ ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಈಡೇರಿಸಿದ್ದಾರೆ. ನಮ್ಮಲ್ಲಿ ಇಂದು ಸಾವಿರಾರು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನಿನ್ನೂ ಸರಬರಾಯಿಮಾಡಿಲ್ಲ. ಅಲ್ಲಿ ಸಾಕಷ್ಟು ಪಂಪ್‌ಸೆಟ್ಟುಗಳಿಗೂ ಪವರನ್ನು ಒದಗಿಸಿದ್ದಾರೆ. ಇದರಿಂದ ಅವರು ಬಹಳ ಉತ್ಪಾದನೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ನಾವು ಪವರನ್ನು ಕೇಳಿದರೆ ಇಲ್ಲದ ಸಾಮಗ್ರಿಗಳು ಇಲ್ಲವೆಂಬ ಕೊರತೆಯಮಾತನ್ನು ಹೇಳುತ್ತಿದ್ದಾರೆ. ಅಲ್ಲಿಲ್ಲದ ಕೊರತೆ ಇಲ್ಲಿ ಹೇಗೆ ಬಂತೋ ಗೊತ್ತಾಗುವುದಿಲ್ಲ. ಇದು ಬಹಳ ಆಶ್ಚರ್ಯ. ಆದರೆ ಇಲ್ಲಿಯವರೆಗೂ ಇದರ ಛೇರ್ಮನ್ನರು ಒಬ್ಬ ರಾಜಕಾರಣಿಗಳಿದ್ದರು. ಇನ್ನು ಮುಂದೆ ಆ ಸ್ಥಾನಕ್ಕೆ ಒಬ್ಬ ಇದೇ ಇಲಾಖೆಯಲ್ಲಿ ನಿವೃತ್ತರಾದ ಒಬ್ಬ ಚೀಫ್ ಇಂಜಿನಿಯರನ್ನು ಹಾಕುವುದಾಗಿ ಕೇಳಿದ್ದೇನೆ. ಅಂಥವರಿಂದ ಬಹಳ ಅನುಕೂಲ ಆಗುತ್ತದೆ. ಅವರಿಗೆ ಇದರಲ್ಲಿ ಚೆನ್ನಾಗಿ ಅನುಭವ ಇರುತ್ತದೆ. ಅವರು ಹೇಳಿ ಕೆಲಸ ಮಾಡಿಸುವುದಕ್ಕೂ ತಾವೇ ಸ್ವತಃ ಕೆಲಸ ಮಾಡುವುದಕ್ಕೂ ತುಂಬಾ ವ್ಯತ್ಯಾಸವಿರುತ್ತದೆ. ಅವರಿಗೆ ಎಲ್ಲಿ ಏನು ವ್ಯತ್ಯಾಸವಾಗಿದೆ ಎಂಬುದನ್ನು ಬೇಗ ಕಂಡುಹಿಡಿದು ಅದನ್ನು ಸರಿಪಡಿಸತಕ್ಕ ಚೈತನ್ಯವಿರುತ್ತದೆ. ಇದರ ಬಗ್ಗೆ ಮುಂದೆ ಮಾಡಬೇಕಾಗಿರತಕ್ಕ ಒಂದು ಬಹು ಮುಖ್ಯವಾದ ಕಾರ್ಯವೇನೆಂದರೆ ಯಾವ ಯಾವ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿದೆ ಇನ್ನು ಯಾವ ಗ್ರಾಮಗಳಿಗೆ ಸರಬರಾಯಿ ಮಾಡಬೇಕು ಎಂಬ ಬಗ್ಗೆ ಒಂದು ಸರ್ವೆ ನಡೆಸಿ ಒಂದು ಅಂದಾಜನ್ನು ತಯಾರಿಸಿ ಅದರಂತೆ ಕಾರ್ಯ ನಡೆಸುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ನಮ್ಮ ಹುಬ್ಬಳ್ಳಿ ಮತ್ತು ಧಾರ್ವಾಡ ಜಿಲ್ಲೆಯಲ್ಲಿ ಪಂಪ್‌ಸೆಟ್ಟುಗಳಿಗಾಗಿ ಅನೇಕ ಅರ್ಜಿಗಳು ಬಂದಿವೆ. ಅವರು ಹಣವನ್ನು ಸಹಿತ ಡೆಪಾಜಿಟ್‌ಮಾಡಲು ಸಿದ್ಧರಾಗಿದ್ದಾರೆ. .ಅನೇಕರು ಹಣವನ್ನು ಈಗಾಗಲೇ ಡೆಪಾಜಿಟ್ ಕೂಡ ಮಾಡಿದ್ದಾರೆ. ಅಲ್ಲಿಗೆ ಈ ದಿವಸ ಲೆಕ್ಕಕ್ಕೆ 569 ಪಂಪ್‌ಸಟ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದರೂ ಅಲ್ಲಿ ಕೆಲಸಮಾಡುತ್ತಿರುವುದು ಕೆಲವೇ ಕೆಲವು ಮಾತ್ರ. ಅಲ್ಲಿ ಅನೇಕ ಪಂಪ್‌ಸೆಟ್ಟುಗಳಿಗಿನ್ನೂ ಪವರನ್ನ ಕೊಟ್ಟೇ ಇಲ್ಲ. ನಮ್ಮ ಧಾರ್ವಾಡ ಜಿಲ್ಲೆಯಲ್ಲಿ ಪಂಪ್‌ಸೆಟ್ಟುಗಳಿಗೆ ಹೆಚ್ಚಿನ ಪವರನ್ನು ಸರಬರಾಯಿ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಅಲ್ಲಿ ಸದಾ ನೀರು ಹರಿಯತಕ್ಕ ಹಳ್ಳಗಳೂ ಮತ್ತು ನದಿಗಳೂ ಬಹಳವಾಗಿದೆ. ಅಲ್ಲಿಗೆ ಒದಗಿಸಲಾಗಿದ್ದ 64—65ನೇ ಸಾಲಿನ ಹಣವೆಲ್ಲ ಲ್ಯಾಪ್ಸಾಗಿದೆ. ಹೀಗಿದ್ದರೆ ಮುಂದೆ ಇವರು ಹಣವನ್ನು ಹೇಗೆ ಖರ್ಚುಮಾಡುತ್ತಾರೋ ತಿಳಿಯದಾಗಿದೆ. ಇನ್ನು ಜನರೇಟಿಂಗ್ ಮತ್ತು ರಿಸೀವಿಂಗ್ ಸ್ಟೇಷನ್‌ಗಳಲ್ಲಿ ಸಿಬ್ಬಂದಿ ಬಹಳ ಕಡಮೆಯಾಗಿದೆ. ಅದರಿಂದ ಕಲೆಕ್ಟ್ ಮಾಡತಕ್ಕ ಹಣವನ್ನು ಸಹಿತ ಸರಿಯಾಗಿ ಕಲೆಕ್ಟ್‌ಮಾಡುತ್ತಿಲ್ಲ. ಇದರಿಂದ ಹಣ ಬಹಳವಾಗಿ ನಷ್ಟವಾಗುತ್ತಿದೆ. ಆದ್ದರಿಂದ ಅಲ್ಲಿಗೆ ಹೆಚ್ಚಿನ ಸಿಬ್ಬಂದಿಯನ್ನು ಕೂಡಲೇ ನೇಮಕ ಮಾಡಬೇಕೆಂದು ಹೇಳುತ್ತೇನೆ. ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಪಂಪುಗಳಿಗೆ ಒದಗಿಸತಕ್ಕ ಪವರಿನ ಟ್ಯಾರೀಫ್ ರೇಟನ್ನು ತಗ್ಗಿಸಬೇಕೆಂದು ಹೇಳುತ್ತೇನೆ, ಜನರಿಗೆ ಒಂದು ಪ್ರೋತ್ಸಾಹ ನೀಡುವಂತಿರಬೇಕು. ನಮ್ಮಲ್ಲಿ ಹೆಚ್ಚುಹೆಚ್ಚಾಗಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಸ್ಥಾಪಿಸಲು ಅವಕಾಶವಿದೆ. ಅವುಗಳಿಗೆ ಸಾಕಷ್ಟು ಪವರನ್ನು ಉಪಯೋಗಿಸಲು ಅವಕಾಶವಿರುತ್ತದೆ. ನಮ್ಮ ಹುಬ್ಬಳಿಯಲ್ಲಿರತಕ್ಕ ಇಂಡಸ್ಟ್ರಿಗಳಿಗೆ ಸಾಕಷ್ಟು ಪವರನ್ನು ಸರಬರಾಯಿಮಾಡುತ್ತಿಲ್ಲ. ಅಲ್ಲಿ ಮೆಷನ್ ಮತ್ತು ರಾಮೆಟೀರಿಯಲ್ಸ್‌ಗಳೆಲ್ಲಾ ರೆಡಿಯಾಗಿದೆ. ಅಲ್ಲಿ ಸಾಕಷ್ಟು ವಿದ್ಯುತ್ತನ್ನು ಪೂರೈಕೆ ಮಾಡಬೇಕೆಂದು ಹೇಳುತ್ತೇನೆ. ಅಲ್ಲಿ ಗ್ರಾಮಗಳಿಗೆ ಪವರನ್ನು ಒದಗಿಸತಕ್ಕ ಬಗ್ಗೆ ಕಂಬ ಮತ್ತು ತಂತಿ ಇತ್ಯಾದಿಗಳನ್ನೆಲ್ಲಾ ಹಾಕಿದ್ದಾರೆ. ಆದರೆ ಟ್ರಾನ್ಸ್‌ಫಾರ್ಮರ್ಸ್ ಮತ್ತು ಜನರೇಟುಗಳಿಲ್ಲವೆಂದು ಪವರನ್ನೆ ಕೊಟ್ಟಿಲ್ಲ. ಬೋರ್ಡಿನವರು ಇವುಗಳನ್ನೆಲ್ಲಾ ವಿಚಾರಮಾಡಿದ್ದರೆ ಮುಂದೇನು ಗತಿಯಾಗುತ್ತದೊ ಎಂಬ ಹೆದರಿಕೆ ಉಂಟಾಗಿದೆ. ಕೆಲವು ಕಡೆ ಟ್ರಾನ್ಸ್‌ಫಾರ್ಮರುಗಳಿದ್ದರ ತಂತಿಯಿಲ್ಲ ಎಂದು ಹೇಳುತ್ತಾರೆ, ತಂತಿಯಿದ್ಧಲ್ಲಿ ಕಂಬಗಳಿಲ್ಲ, ಒಂದಿದ್ದರೆ ಒಂದಿಲ್ಲ ಎಂದು ಹೇಳತಕ್ಕದ್ದು ಒಂದು ವಾಡಿಕೆಯಾಗಿ ಬಂದು

(ಶ್ರೀ ಸಿದ್ದಯ್ಯ ಕಾಶೀಮಠ್)

ಹೋಗಿದೆ. ಆದಷ್ಟು ಬೇಗ ಈ ಸಲಕರಣೆಗಳನ್ನು ಶೇಖರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಬೋರ್ಡಿನವರು ಇದರ ಪೂರೈಕೆಯನ್ನು ಮಾಡುವಾಗ ಡಿವಿಜನಲ್ ಲೆವಲ್ಲಿನಲ್ಲಿ ಒಂದೊಂದು ಸಮಿತಿಯನ್ನು ಮಾಡಿ ಅದರಲ್ಲಿ ಸ್ಥಳೀಯ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರೂ ಮತ್ತು ಅಲ್ಲಿನ ಎಂ. ಎಲ್. ಎ. ಗಳು ಅದರಲ್ಲಿದ್ದು ಸೂಕ್ತ ಸಲಹೆಗಳನ್ನು ಕೊಡುವುದಕ್ಕೆ ಅವಕಾಶ ಮಾಡಬೇಕು ಎಂದು ಸಲಹೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆವಲರೆಡ್ಡಿ (ಶಿಡ್ಲಗಟ್ಟ).—ಸ್ವಾಮಿ, ಈಗ ನಮ್ಮ ಸಭೆಯ ಮುಂದೆ ಇಟ್ಟಿರತಕ್ಕ ಮೈಸೂರುರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡಿನ ಆಯವ್ಯಯಪಟ್ಟಿಯನ್ನು ಅನುಮೋದಿಸುತ್ತಾ ಅದರ ಬಗ್ಗೆ ಒಂದೆರೆಡು ಮಾತುಗಳನ್ನು ಆಡಬೇಕೆಂದು ನಾನೀಗ ಎದ್ದು ನಿಂತಿದ್ದೇನೆ.

ಈ ಮೈಸೂರು ಎಲೆಕ್ಟ್ರಿಸಿಟಿ ಬೋರ್ಡ್ ಜಾರಿಗೆ ಬರುವ ಮುನ್ನ ನಮ್ಮ ಹಳೇ ಮೈಸೂರಿನಲ್ಲಿ. ಒಂದು ಹಳ್ಳಿಗೇನಾದರೂ ಪವರನ್ನು ತೆಗೆದುಕೊಳ್ಳಬೇಕಾಗಿದ್ದರೆ 8-10 ವರ್ಷಗಳ ಕಾಲ ಹಿಡಿಯುತ್ತಿತ್ತು. ಆಗಿನ ಸರ್ಕಾರದಲ್ಲಿ ಕೆಲಸಮಾಡುತ್ತಿದ್ದ ಅಧಿಕಾರಿಗಳು ಆಗಿದ್ದ ಒಂದು ಕಾನೂನಿನ ಪ್ರಕಾರ ಕೆಲಸಮಾಡಬೇಕಾಗಿತ್ತು. ಅವರು ಇಂತಿಷ್ಟು ಪರ್ಸೆಂಟ್ ರಿಟರ್ನ್ ಬಂದರೇನೇ ಅವರು ಪವರನ್ನು ಕೊಡುವುದಕ್ಕೆ ಮನಸ್ಸು ಮಾಡುತ್ತಿದ್ದರು. ಉದಾಹರಣೆಗೆ ನನ್ನ ಗ್ರಾಮವಾದ ಸಾದಲಿಗೆ ನಾನು ಹಿಂದೆ ಎಂ. ಆರ್. ಎ. ಆಗಿದ್ದಾಗ 1944 ರಲ್ಲಿ ಪವರಿಗಾಗಿ ಅರ್ಜಿ ಹಾಕಿದ್ದೆನು. ಆ ವಿಚಾರ ಅಸೆಂಬ್ಲಿಯ ಮುಂದೆಯೂ ಬಂದಾಯಿತು. ಅನಂತರ ತಜ್ಞರು ಅಲ್ಲಿಗೆ ಬಂದು ತರ್ಖೆಮಾಡಿ ಅದಕ್ಕೆ 6—7 ಲಕ್ಷ ರೂಪಾಯಿ ಆಗುತ್ತೆ, ಸರ್ಕಾರಕ್ಕೆ ಬರಬೇಕಾದ ಪರ್ಸೆಂಟೇಜ್ ಆಫ್ ರಿಟರ್ನ್ ಬಹಳ ಕಡಮೆ, ಆದ್ದರಿಂದ ಸಾಧ್ಯವಿಲ್ಲ ಎಂಬುದಾಗಿ ಹೇಳಿದ್ದರು. ಆದರೆ ಇತ್ತಿಚೆಗೆ 1963—64 ರಲ್ಲಿ ಬೋರ್ಡು ರಚನೆಯಾದ ನಂತರ ನನ್ನ ಗ್ರಾಮಕ್ಕೆ ಈಗ ಪವರನ್ನು ಕೊಡಲಾಗಿದೆ. ಇದಕ್ಕೆ ಕಾರಣ ಬೋರ್ಡ್ ರಚನೆ ಆದುದೇ ಆಗಿದೆ ಸರ್ಕಾರದವರು ಬೋರ್ಡಿನವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ ಅವರು ಆ ಅಧಿಕಾರವನ್ನು ಚೆನ್ನಾಗಿ ಚಲಾಯಿಸಬಹುದು. ಇದು ಒಂದು ವ್ಯಪಾರದ ಸಂಸ್ಥೆಯಾಗಿದೆ. ಈ ರೀತಿ ನೀವು ಲೈಸೆನ್ಸ್ ಕೊಟ್ಟರೆ, ಕಾನೂನು ಅನುಸರಿಸುತ್ತಾ ಹೋದರೆ ರೂರಲ್ ಎಲೆಕ್ಟ್ರಿಫಿಕೇಷನ್ ಮತ್ತು ಪಂಪ್ ಸೆಟ್ ಗಳಿಗೆ ಕರೆಂಟ್ ಕೊಡುವುದಕ್ಕೆ ಸಾಧ್ಯವಿಲ್ಲ, ಶರಾವತಿ ಬೇರೆ ಬರುತ್ತಾ ಇದೆ, ನಮ್ಮ ಸಂಸ್ಥಾನಕ್ಕೆ ಹೆಚ್ಚು ವಿದ್ಯುಚ್ಛಕ್ತಿ ಬರುತ್ತದೆ ಆದ್ದರಿಂದ They discovered a new method, .i.e, have 11 KVA line ಎಂದು ಅವರು ಹೇಳಿದರು. 11 ಕೆ ವಿ ಲೈನು ಎಲ್ಲ ಬೇಕಾದರೂ ಹಾಕಬಹುದು ಎಂದು ಬೋರ್ಡಿನ ತೀರ್ಮಾನವಾದಮೇಲೆ ಅದಕ್ಕೆ ಹಣದ ಕೊರತೆ ಬಂತು. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಬೋರ್ಡಿನವರಿಗೆ ಒದಗಿಸಿದರು ಮತ್ತು ಅವರೂ ಕೂಡ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಎತ್ತಿ ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕ ಪ್ರತಿ ಹೋಬಳಿಗೂ ಕೂಡ 11 ಕೆ ವಿ ಲೈನ್ ಹಾಕಿದರು. ಅದಕ್ಕಾಗಿ ಅವರ ಬಗ್ಗೆ ಒಂದು ಒಳ್ಳೆಯ ಮಾತನ್ನು ಆಡಬೇಕಾಗಿತ್ತು, ಅದನ್ನು ಆಡಲು ಇಚ್ಛೆಪಟ್ಟೆ. ಬಾಕಿ ವಿಷಯಗಳಲ್ಲಿ ಬೋರ್ಡಿನವರು ಕೆಲವು ಕಡೆ ಎಡವಿರಬಹುದು. ಅದನ್ನು ಹೇಳಲೇ ಬೇಕು, ಹೇಳದೇ ಸುಮ್ಮನೆ ಇರುವುದಕ್ಕಾಗುವುದಿಲ್ಲ. ಬೋರ್ಡಿನವರು ಬಂದ ಮೇಲೆ ಪಂಪ್ ಸೆಟ್‌ಗಳಿಗೆ ಕರೆಂಟ್ ಕೊಡಬೇಕಾದರೆ ಆಗಲ ಮನೆಗೆ ದೀಪವನ್ನು ತೆಗೆದುಕೊಳ್ಳಬೇಕಾದರೆ ಆಗಲ ಸರ್ವೀಸ್ ಮೇನ್ ಚಾರ್ಜಸ್ ಎಂದು ಹೇಳಿ 90—92 ರೂಪಾಯಿ ತೆಗೆದುಕೊಳ್ಳುತ್ತಾ ಇದ್ದಾರೆ, ಇದು ರೀಫಂಡಬಲ್. ರೈತನಿಗೆ ಬರಬೇಕು. ಆ ರೀತಿ ಆಗುತ್ತಾ ಇಲ್ಲ. ಅದನ್ನು ಯಾವನು ಕಂಟ್ರಾಕ್ಟ್ ತೆಗೆದುಕೊಂಡಿರುತ್ತಾನೆ ಅವನಿಗೆ ಕೊಡುತ್ತಾ ಇದ್ದಾರೆ. ಆದ್ದರಿಂದ ನಾನು ಬೋರ್ಡಿನವರಿಗೆ ಸೂಚನೆ ಮಾಡುವುದೇನೆಂದರೆ ಸರ್ವೀಸ್ ಚಾರ್ಜಸ್ ತೆಗೆದುಕೊಳ್ಳಬೇಡಿ ಒಂದು ವೇಳೆ ತೆಗೆದುಕೊಂಡರೆ ಅದನ್ನು ರೈತನಿಗೇ ವಾಪಸು ಕೊಡುವ ಒಂದು ವ್ಯವಸ್ಥೆಯನ್ನು ಮಾಡಿ ಕಂಟ್ರಾಕ್ಟ್‌ದಾರರಿಗೆ ಕೊಡಬೇಡಿ. ಒಂದು ವೇಳೆ ಈ ಸಂದರ್ಭದಲ್ಲಿ ಬೋರ್ಡಿನವರಿಗೆ ಹಣದ ಅಭಾವ ಇದೆ ಎನ್ನುವುದಾದರೆ ಆ ಹಣವನ್ನು ಬೋರ್ಡಿನವರೇ ತೆಗೆದುಕೊಳ್ಳಿ. ಬೋರ್ಡಿಗಾದರೂ ಆದಾಯ ಬರಲಿ. ಈ ವಿಷಯವನ್ನು ಬೋರ್ಡಿನವರೊಡನೆ ಚರ್ಚೆಮಾಡಿದ್ದೇನೆ. ಈ ರೀತಿ ಬೋರ್ಡಿನವರಾದರೂ ಆದಾಯವನ್ನು ತೆಗೆದುಕೊಂಡು ರೈತನಿಗೆ ಸಾಧ್ಯವಾದಷ್ಟು ಅನುಕೂಲಗಳನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸರ್ಕಾರದವರು ಹೆಚ್ಚಿಗೆ ಆಹಾರವನ್ನು ಉತ್ಪನ್ನ ಮಾಡಬೇಕಾಗಿದ್ದರೆ ರೈತನಿಗೆ ಪಂಪ್‌ಸೆಟ್ಟುಗಳನ್ನು ಒದಗಿಸಬೇಕಾದ್ದು ಅಗತ್ಯ ಎಂಬುದನ್ನು ಸರ್ಕಾರದವರು ಎರಡು ವರ್ಷದ ಹಿಂದೆ ಕಂಡುಕೊಂಡರು. 17 ವರ್ಷದಿಂದ ಕಣ್ಣು ಮುಚ್ಚಿಕೊಂಡು ಕುಳಿತು ಕೊಂಡಿದ್ದೇ, ಆಹಾರ ಅಭಾವ ತುಂಬಾ ಹೆಚ್ಚಾಗುವುದಕ್ಕೆ ಕಾರಣವಾಗಿದೆ. ಸ್ಟೇಟ್ ಗವರ್ನಮೆಂಟಿನವರು ಎರಡು ಕೋಟಿ ರೂಪಾಯಿ ಸೆಂಟ್ರಲ್ ಗವರ್ನಮೆಂಟಿನವರು

ಎರಡು ಕೋಟಿ ರೂಪಾಯಿಗಳನ್ನು ಒದಗಿಸಿ ಒಟ್ಟು ನಾಲ್ಕು ಕೋಟಿ ರೂಪಾಯಿಗಳ ವೆಚ್ಚದಲ್ಲಿ 6000 ಪಂಪ್ ಸೆಟ್ಟುಗಳಿಗೆ ಒದಗಿಸಿದರು ಅದನ್ನು ಬೋರ್ಡಿನವರು ರೈತರಿಗೆ ಸಪ್ಲೈ ಮಾಡಿದ್ದಾರೆ ಮಾಡಿದ್ದರೂ ಕೂಡ ರೈತ ಹೆಚ್ಚಿಗೆ ಬೆಳೆ ಬೆಳೆದಿದ್ದಾನೆಯೇ ಎಂಬ ಪ್ರಶ್ನೆ ಬರುತ್ತದೆ. ಅನೇಕ ಪಂಪ್ ಸೆಟ್ಟುಗಳು ಕೆಲಸ ಮಾಡುತ್ತಾ ಇಲ್ಲ, ಮೂಲೆಯಲ್ಲಿ ಬಿದ್ದಿವೆ. ಅದಕ್ಕೆ ಬೇಕಾದ ಪವರ್‌ನ್ನು ಒದಗಿಸಲು ಅವಶ್ಯಕವಾದ ಸಾಮಾನುಗಳು ಎಂದರೆ ವೈರ್ಸ್, ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ಅದು ಇಲ್ಲ, ಇದು ಇಲ್ಲ ಎಂದು ಹೇಳುತ್ತಾ ಇದ್ದಾರೆ. ಈ ರೀತಿ ಆದರೆ ಏನು ಮಾಡಬೇಕು ದಿನ ಬೆಳಗಾದರೆ ರೈತರು ನಮ್ಮನ್ನು ಕೇಳುತ್ತಾರೆ. ಚೀಫ್ ಇಂಜನಿಯರು ಮತ್ತು ಬೋರ್ಡಿನ ಚೇರ್ಮನ್ ಎಲ್ಲರನ್ನೂ ಈ ವಿಷಯದಲ್ಲಿ ಬಹಳವಾಗಿ ಒತ್ತಾಯ ಮಾಡಿದ್ದೇನೆ. ಏಕೆಂದರೆ ನಾನು ಆಗಾಗ್ಗೆ ರೈತನಿಗೆ ಬೇಕಾದ ಪಂಪ್ ಸೆಟ್ಟುಗಳು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಅವರ ಹತ್ತಿರ ಹೋಗುತ್ತಾ ಇರುತ್ತೇನೆ ಅವರ ಪರಿಚಯ ಇಟ್ಟುಕೊಂಡಿದ್ದೇನೆ. ಅವರು ಶಕ್ತಿ ಮೀರಿ ಕೆಲಸ ಮಾಡಿದಾಗ್ಯೂ ಬಹಳ ಕಮ್ಮಿ ಪರ್ಸೆಂಟೇಜ್ ಪಂಪ್‌ಸೆಟ್ಸ್ ಸರ್ವೀಸ್ ಆಗುತ್ತಾ ಇದೆ. ಇದಕ್ಕೆ ಕಾರಣ ವೇನು ಎಂಬುದನ್ನು ಅವರು ಕೂಲಂಕಷವಾಗಿ ಆಲೋಚನೆ ಮಾಡಬೇಕು. ಮದರಾಸ್ ಸರ್ಕಾರ ದವರು, ಆಂಧ್ರಸರ್ಕಾರದವರು ಮತ್ತು ಕೇರಳ ಸರ್ಕಾರದವರು ಅಲ್ಲಿರತಕ್ಕ ಫ್ಯಾಕ್ಟರಿಗಳವರಿಗೆ ಕೇಳಿದರೆ ಕೇಂದ್ರಸರ್ಕಾರದವರು ಅಲ್ ರೈಟ್ ಪಾಸ್ ಆರ್ಡರ್ಸ್ ಅಂತ ಹೇಳಿ ಅವರಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಡುತ್ತಾರೆ ಆದರೆ ನಮಗೆ ಮಾತ್ರ ಅದು ಸಿಕ್ಕುತ್ತಾ ಇಲ್ಲ. ಹೋದ ವರ್ಷ ಬೇಸಗೆಯಲ್ಲಿ ನಾವು ಬಹಳ ಕಷ್ಟಪಟ್ಟೆವು, ಆದ್ದರಿಂದ ಈ ಸಾರಿಯಾದರೂ ಆ ಪಂಪ್ ಸೆಟ್ಟು ಗಳನ್ನು ಸರ್ವೀಸ್ ಮಾಡಲು ಬೇಕಾಗತಕ್ಕ ವೈರ್ಸ್ ಮತ್ತು ಇತರ ಸಾಮಾನುಗಳನ್ನು ಒದಗಿಸಿ ಕೊಳ್ಳಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಿ ಆಶೆ ಪಡುತ್ತೇನೆ. ಕೋಲಾರ ಜಿಲ್ಲೆ ಯಲ್ಲಿ 6 ಸಾವಿರ ಪಂಪ್ ಸೆಟ್ಸ್ ಇವೆ ಎಂದು ಮಾನ್ಯ ಸದಸ್ಯರು ಹೇಳಿದರು. ಎರಡು ವರ್ಷದಿಂದ ಅಷ್ಟೂ ಸಪ್ಲೈ ಮಾಡಿದ್ದಲ್ಲ. ಕೆ. ಜಿ. ಎಫ್.ಗೆ ಕರೆಂಟ್ ಬಂದರಾಗಾಯ್ತು 30—40 ವರ್ಷದ ಹಿಂದಿನಿಂದ ಸಪ್ಲೈಮಾಡಿದ್ದೂ ಕೂಡ ಅದರಲ್ಲಿ ಸೇರಿದೆ.

ಅಧ್ಯಕ್ಷರು.—ಸೆಪ್ಟೆಂಬರ್ ಕೊನೆಯ ಹೊತ್ತಿಗೆ ಕೋಲಾರ ಜಿಲ್ಲೆಗೆ 7,402 ಪಂಪ್ ಸೆಟ್‌ಗಳನ್ನು ಸಪ್ಲೈ ಮಾಡಿದ್ದಾರೆ.

ಶ್ರೀ ಎಸ್. ಅವಲರೆಡ್ಡಿ.—ಇರಬಹುದು, ಒಂದೊಂದು ತಾಲ್ಲೂಕಿಗೆ 70-80 ರಂತೆ ಹಂಚಿ ದ್ದಾರೆ ಎಂದಮೇಲೆ 11 ತಾಲ್ಲೂಕಿಗೆ ಎಷ್ಟು ಬಂದಿದೆ ಎಂಬುದನ್ನು ತಾವೇ ನೋಡಿ ಸ್ವಾಮಿ. ಎಲೆಕ್ಟ್ರಿಸಿಟಿ ಬೋರ್ಡಿನವರು ಪಂಪ್ ಸೆಟ್ಟುಗಳನ್ನು ಸಪ್ಲೈ ಮಾಡುವಾಗ ಟೆಂಡರ್ ಕಾಲ್‌ಫಾರ್ ಮಾಡುತ್ತಾರೆ—ಎಲ್ಲೂ ಕೂಡ ಪಂಪ್ ಸೆಟ್ಟುಗಳನ್ನು ಕೊಟ್ಟಿಲ್ಲ, ರೈತರು ಕೇಳುತ್ತಾ ಇದ್ದಾರೆ— ನಾಳೆ ವರ್ಷ ಕೊಡಿಸುತ್ತೇವೆ ಎಂದು ಹೇಳಿದಿರಿ ನಮಗೆ ಇದುವರೆಗೂ ಬರಲಿಲ್ಲ ಕೊಡಿಸುತ್ತೀರೋ ಇಲ್ಲವೊ ಎಂದು ಕೇಳುತ್ತಾ ಇದ್ದಾರೆ ಅದು ಸಹಜವೇ. ಒಂದೇಸಾರಿ ಎಲ್ಲಾ ರೈತರಿಗೂ ಆಗುವುದಿಲ್ಲ ಈ ಸಾರಿ ಐದು ಜನರಿಗೆ ಕೊಟ್ಟರೆ ಮುಂದಿನ ಸಾರಿ ಐದು ಜನಕ್ಕೆ ಕೊಡುತ್ತೇವೆ ಎಂದು ಹೇಳು ತ್ತಾರೆ ನಿಜ. ಆದರೆ ಅದನ್ನೂ ಸಹ ಈ ಸಾರಿ ನಿಲ್ಲಿಸಿಯೇ ಬಿಟ್ಟಿದ್ದಾರೆ. ಆದ್ದರಿಂದ ಸರ್ಕಾರದವರ ಪಂಪ್ ಸೆಟ್ಟ್‌ಗಳಿಗೆ ಕೊಡತಕ್ಕ ಹಣವನ್ನು under any circumstances it should not be used for other purposes. It should be used for purchase of only pump sets. ಎಂದು ಅವರಿಗೆ ಹೇಳಲೇ ಬೇಕು.

ಮದರಾಸ್ ಮತ್ತು ಇತರ ಅಕ್ಕಪಕ್ಕದ ರಾಜ್ಯಗಳಲ್ಲಿ ಟ್ಯಾರಿಫ್ ಜಾಸ್ತಿ ಇದೆ. ಆದ್ದರಿಂದ ನಮ್ಮಲ್ಲೂ ಕೂಡ ಜಾಸ್ತಿ ಮಾಡುತ್ತಾ ಇದ್ದೇವೆ ಎಂದು ಮಾನ್ಯ ಅರ್ಥಿಕ ಸಚಿವರು ಹೇಳಿದರು. ಮದರಾಸಿನಲ್ಲಿ ಒಂದು ಲಕ್ಷದ 50 ಸಾವಿರ ಪಂಪ್ ಸೆಟ್‌ಗಳು ಇವೆ, ಮೈಸೂರು ಸ್ಟೇಟಿನಲ್ಲಿ 23 ಸಾವಿರ ಇದ್ದದ್ದು ಈಗ 30 ಸಾವಿರಕ್ಕೆ ಏರಿದೆ. ಹಾಗಿರುವಾಗ ಯಾವ ಕಂಪ್ಯಾರಿಸನ್ ಮೇಲೆ ಅದನ್ನು ಕೇಳುತ್ತೀರಿ ? ಹಣ ಜಾಸ್ತಿ ಬೇಕೇ ಹೊರತು ಪಂಪ್ ಸೆಟ್ಟುಗಳನ್ನು ಜಾಸ್ತಿ ಕೊಡಿಸೋಣ ಎಂಬುದು ಅವರಿಗೆ ಹೊಳೆಯಲಿಲ್ಲ.

ಇನ್ನು ಪಂಪ್ ಸೆಟ್ಟುಗಳನ್ನು ಹಂಚಿಕೆ ಮಾಡುವ ವಿಷಯದಲ್ಲಿ ಒಂದು ಮಾತನ್ನು ಹೇಳ ಬೇಕಾಗಿದೆ. ವಿಪರೀತ ಮಳೆ ಬೀಳತಕ್ಕ ಕ್ಷೇತ್ರದಲ್ಲಿ ಸ್ವಲ್ಪ ಕಮ್ಮಿ ಪಂಪ್ ಸೆಟ್ಟುಗಳನ್ನು ಕೊಟ್ಟು ಮಳೆ ಬೀಳದೆ ಇರತಕ್ಕ 9 ಜಿಲ್ಲೆಗಳು ಇವೆ ಅಲ್ಲಿಗೆ ಜಾಸ್ತಿ ಪಂಪ್ ಸೆಟ್ಟುಗಳನ್ನು ಕೊಡಬೇಕೆಂದು ಸೂಚನೆ ಮಾಡುತ್ತೇನೆ. ಏಕೆಂದರೆ ಮಳೆ ಬೀಳುವ ಕಡೆ ಅಷ್ಟೋ ಇಷ್ಟೋ ಬೆಳೆಯಾಗುತ್ತದೆ. ಮಲೆನಾಡು ಮತ್ತು ಸೆಮಿ ಮಲೆನಾಡು ಈ ಪ್ರದೇಶದಲ್ಲಿ :

Priority should be given in larger proportion in all these nine districts which suffer from scarcity of rain.

(ಶ್ರೀ ಎಸ್. ಆವಲರೆಡ್ಡಿ)

ಇನ್ನು ರೂರಲ್ ಎಲೆಕ್ಟ್ರಿಫಿಕೇಷನ್ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. 11 ಕೆ.ವಿ. ಲೈನ್ ಆದಮೇಲೆ—ಪಂಚಾಯಿತ್ತಿ ಬೋರ್ಡ್ ಬಂದಮೇಲೆ ಅವರ ಆರ್ಥಿಕ ಪರಿಸ್ಥಿತಿ ಸರಿಹೋದ ಮೇಲೆ ಅವರು ತಮಗೆ ಪವರ್ ಬೇಕೆಂದು ಅರ್ಜಿಗಳನ್ನು ಹಾಕುತ್ತಾ ಇದ್ದಾರೆ. ಹಳ್ಳಿಗಳಿಗೆ ಪವರ್‌ನ್ನು ಕೊಡುತ್ತಾ ಇದ್ದೀರಿ. ಮೊದಲಿನಿಂದಲೂ ಕೂಡ ಹಳ್ಳಿಗಳಿಗೆ ಹೆಚ್ಚಿಗೆ ಪವರ್ ಕೊಡಲಿಲ್ಲ ಆದ್ದರಿಂದ ಅನೇಕ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಹಳೇ ಮೈಸೂರು ಏರಿಯಾದಲ್ಲಿ ಒಂದು ಲಕ್ಷ 90 ಸಾವಿರದಿಂದ, 5 ಲಕ್ಷದವರೆಗೂ ಡಿವಿಜನ್‌ಹ್ವೈಸ್ ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಹಣ ಮಂಜೂರು ಮಾಡಿದ್ದೀರಿ. ಬೊಂಬಾಯಿ ಕರ್ನಾಟಕ, ಹೈದರಾಬಾದು ಕರ್ನಾಟಕದ ಅಂಕಿಅಂಶವನ್ನು ನೋಡಿದರೆ 18 ಲಕ್ಷದಿಂದ ಹಿಡಿದು 53 ಲಕ್ಷದವರೆಗೂ ಮಂಜೂರು ಮಾಡಿದ್ದೀರಿ. ಅಲ್ಲಿ ಹಳ್ಳಿಗಳು ಜಾಸ್ತಿ ಇರಬಹುದು ಅಂದ ಮಾತ್ರಕ್ಕೆ ನಮ್ಮಲ್ಲಿ ಹಳ್ಳಿಗಳು ಕಮ್ಮಿಇದೆಯೇ ? ಎಂದು ನಾನು ಕೇಳಬಯಸುತ್ತೇನೆ. ಈ ರೀತಿ ಬೋರ್ಡಿನವರು ಒಂದೇ ಏರಿಯಾಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ತಾರತಮ್ಯಮಾಡುವುದು ಸರಿಯೇ ಎಂದು ಕೇಳುತ್ತೇನೆ. ಅದು ಬ್ಯಾಕ್‌ವರ್ಡ್ ಏರಿಯಾ ಇರಬಹುದು ಆದರೂ ಕೂಡ ಅಲ್ಲಿ 100 ಹಳ್ಳಿಗಳಿಗೆ ಕೊಟ್ಟರೆ ಇಲ್ಲೂ 100 ಹಳ್ಳಿಗಳಿಗೆ ಕೊಡಿ ಆ ರೀತಿ ಮಾಡಿದರೆ ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ. ಒಂದು ಜಿಲ್ಲೆಯಲ್ಲಿ 10 ಹಳ್ಳಿಗಳಿಗೆ ಇನ್ನೊಂದು ಜಿಲ್ಲೆಯಲ್ಲಿ 10 ಹಳ್ಳಿಗಳಿಗೆ ಕೊಟ್ಟು ಎಲ್ಲರಿಗೂ ದೊರೆಯುವಂತೆ ನೋಡಿಕೊಳ್ಳೋಣ. ಹೊಸದಾಗಿ ರಚಿಸಿರುವ ಬೋರ್ಡಿನಲ್ಲಿ ತಜ್ಞರಿದ್ದಾರೆ, ಶ್ರೀ ಸಾಂಬ ಶಿವಯ್ಯನವರು ರಿಟೈರ್ಡ್ ಚೀಫ್ ಎಂಜಿನಿಯರು, ಅವರಿಗೆ ಸ್ವಬುದ್ಧಿಯಿದೆ, ಅವರು ಯಾರ ಮೇಲೂ ಡಿಪೆಂಡಾಗುವುದಿಲ್ಲ, ತಜ್ಞರು, ಅನುಭವಿಗಳು. ಅವರು ಟೆಕ್ನಿಕಲ್ ಮ್ಯಾನ್, ಅವರು ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ಹಂಚುವಾಗ ಹೊಸ ಮೈಸೂರು, ಹಳೆಯ ಮೈಸೂರು ಎಂಬ ಭೇದವಿಲ್ಲದೆ ಒಂದೇ ಸಮನಾಗಿ ಹಂಚುತ್ತಾರೆಂಬ ಭರವಸೆಯಿದೆ. ಹಾಗೆ ಹಂಚುವಾಗ ಹತ್ತು ಹಳ್ಳಿ ಹೆಚ್ಚು ಕಡಮೆಯಾದರೂ ಪರವಾಗಿಲ್ಲ, ಅದರಿಂದ ತೊಂದರೆಯಿಲ್ಲ. ಈಗಿನ ಬಡ್ಜೆಟ್ಟನ್ನು ನೋಡಿದರೆ ಹಳೆಯ ಮೈಸೂರನ್ನು ಕೇಳುವವರೇ ಇಲ್ಲ ಎಂದು ಹೇಳಬಹುದು. ಅದಕ್ಕೆ ಅಂಕಿ ಅಂಶಗಳಿಂದ ಸಮಾಜಾಯಿಷಿ ಹೇಳಬಹುದು. ಆದರೆ ಲಕ್ಷಾಂತರ ರೂಪಾಯಿಗಳ ವ್ಯತ್ಯಾಸವಿರುವಂತೆ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈಗಿರುವ ಹೊಸ ಬೋರ್ಡು ಕೂಲಂಕಷವಾಗಿ ಎಲ್ಲವನ್ನೂ ಪರಿಶೀಲಿಸಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಪ್ರತಿಯೊಂದು ಹಳ್ಳಿಗೂ ಕೂಡ ಒದಗಿಸುತ್ತದೆಂದು ನಾನು ಆಶಿಸುತ್ತೇನೆ.

5-30 P.M.

ಆಮೇಲೆ ಪವರ್ ಸರಬರಾಯಿಗೆ ದರ ಜಾಸ್ತಿ ಮಾಡಬೇಕೆಂಬ ವಾದ ಸರಕಾರದಲ್ಲೂ ಮತ್ತು ಬೋರ್ಡಿನಲ್ಲೂ ಇದೆ. ಇದು ಎಲ್ಲರಿಗೂ ಗೊತ್ತಿದೆ. ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟಿನಲ್ಲಿ ಒಂದು ಯೂನಿಟ್ ವಿದ್ಯುಚ್ಛಕ್ತಿಯನ್ನು ತಯಾರಿಸಲು ಎಷ್ಟು ಖರ್ಚು ಬೀಳುತ್ತದೆ? ಬೇರೆ ಡೀಸಲ್ ಪಂಪಿನಿಂದ ತಯಾರಿಸಲು ಎಷ್ಟು ಖರ್ಚು ಬೀಳುತ್ತದೆ ಎಂದು ಹೋಲಿಕೆ ಮಾಡಿ ನೋಡಿದರೆ ನಾವು ತಯಾರಿಸುವುದಕ್ಕೆ ಕಡಮೆ ಖರ್ಚು ಬೀಳುತ್ತದೆ. ಎಲ್ಲಾ ಸ್ಟೇಟುಗಳನ್ನೂ ನೋಡಿದರೆ ನಮ್ಮಲ್ಲಿ ಕಡಮೆ ಖರ್ಚಿನಲ್ಲಿ ಪವರ್ ಉತ್ಪತ್ತಿಯಾಗುತ್ತಿದೆ ಎಂದು ಹೇಳುವಾಗ ಕಡಮೆ ದರದಲ್ಲಿ ಹೆಚ್ಚು ಉಪಯೋಗ ಮಾಡಲಿ ಎಂಬ ಆಶಯವಿರಬೇಕು. ಆದರೆ ಪಕ್ಕದ ಮನೆಯವರಿಗೆ ಒಬ್ಬಟ್ಟು ಮಾಡಲು ಶಕ್ತಿಯಿರುವಾಗ ನಮಗೆ ಅಷ್ಟು ಶಕ್ತಿಯಿಲ್ಲದೆ ಇರಬಹುದು. ಹಾಗಿರುವಾಗ ಹೇಗೆ ಪವರನ್ನು ಉಪಯೋಗ ಮಾಡಲು ಸಾಧ್ಯ? ಉದಾಹರಣೆಗೆ ಗೌರಿಬಿದನೂರು ತಾಲ್ಲೂಕಿನಲ್ಲಿ ಪವರನ್ನು ಜಾಸ್ತಿ ಉಪಯೋಗಿಸುತ್ತಾರೆ. ಅಲ್ಲಿ ಪಂಪಿನಿಂದ ನೀರು ತೆಗೆಯುವ ನೀರಾವರಿ ಬೇಕಾದಷ್ಟಿದೆ. 10 ಎಚ್. ಪಿ. ಪಂಪು ಹಾಕಿ ರಾತ್ರಿ ಹಗಲು ಕೆಲಸ ಮಾಡಿ 20—40 ಎಕರೆಗಳಿಗೆ ಕಬ್ಬು ಬೆಳೆದರೆ ತಿಂಗಳಿಗೆ 250 ರೂಪಾಯಿ ಕರೆಂಟ್ ಛಾರ್ಜು ಬೀಳುತ್ತದೆ. 12 ತಿಂಗಳೂ ಅಷ್ಟು ಕಟ್ಟಬೇಕು. ಹೀಗೆ ವರ್ಷಕ್ಕೆ 3,000 ರೂಪಾಯಿ ವಿದ್ಯುಚ್ಛಕ್ತಿಗಾಗಿ ತೆರಬೇಕು. ಬತ್ತ ಬೆಳೆಯಲು 5 ತಿಂಗಳು ಬೇಕು, ಅದಕ್ಕೆ 150 ರಿಂದ 200 ರೂಪಾಯಿಗಳವರೆಗೆ ಕರೆಂಟು ಛಾರ್ಜು ಬೀಳುತ್ತದೆ. ಈ ಖರ್ಚನ್ನು ನೋಡಿ ಬತ್ತ ಬೆಳೆಯುವುದೇ ಬೇಡ ಎಂಬ ಭಾವನೆ ಬರುತ್ತದೆ. ಬೆಳೆಯ ಖರ್ಚು ಹೆಚ್ಚಿರುವಾಗ ಕಂದಾಯ ಏಕೆ ಜಾಸ್ತಿ ಕೊಡಬೇಕೆಂಬ ಭಾವನೆ ಬರುತ್ತದೆ. ವಿದ್ಯುಚ್ಛಕ್ತಿ ಬೋರ್ಡು ಒಂದು ಸಲ ದರ ಜಾಸ್ತಿ ಮಾಡಿದರೆ ಹತ್ತಾರು ವರ್ಷ ಕಡಮೆ ಮಾಡುವುದಿಲ್ಲ. ಅದು ತನ್ನ ಆದಾಯದ ಕಡೆ ಗಮನ ಕೊಡುತ್ತದೆ. ಈ ಬೋರ್ಡಿನಲ್ಲಿ ರೈತರೂ

ಸದಸ್ಯರಾಗಿರಬೇಕು. ಹಾಗಿದ್ದರೆ ಅವರು ರೈತರ ಹಿತರಕ್ಷಣೆ ನೋಡಿಕೊಳ್ಳುತ್ತಾರೆ. ಈಗ ರೈತರಿಗೆ ಬೋರ್ಡಿನಲ್ಲಿ ಅವಕಾಶ ಕೊಡದಿದ್ದರೂ ಚಿಂತೆಯಿಲ್ಲ, ನಾವು ಹೇಳಿರುವುದನ್ನು ಗಮನಿಸಿ ಸಾಕಾದಷ್ಟು ಪರಿಹಾರ ನೀಡುವರೆಂದು ನಂಬಿದ್ದೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ದಿವಸ ನಮ್ಮ ಮುಂದಿರುವ ವಿದ್ಯುಚ್ಛಕ್ತಿ ಬೋರ್ಡಿನ ಬಡ್ಜೆಟ್ಟಿನ ಮೇಲೆ ಅನೇಕರು ಈಗಾಗಲೇ ಮಾತನಾಡಿದ್ದಾರೆ. ಇದು ಅಂಗಡಿ ಲೆಕ್ಕದ ಹಾಗಿದೆಯೇ ಹೊರತು ವಿಮರ್ಶಾತ್ಮಕವಾದ ವಿವರಣೆಯಿಂದ ಕೂಡಿಲ್ಲ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿ ಮತ್ತು ಹಂಚಿಕೆ ಎರಡನ್ನೂ ಕೂಡ ಸರಕಾರ ಇಬ್ಬಂದಿ ಕೆಲಸದಂತೆ ಮಾಡಿದ್ದಾರೆ. ಸರಕಾರವೇ ಈ ಎರಡು ಕೆಲಸವನ್ನು ಕೂಡ ಉಳಿಸಿಕೊಂಡಿದ್ದರೆ ಚೆನ್ನಾಗಿತ್ತು. ಇಲ್ಲದಿದ್ದರೆ ಪೂರ್ಣವಾಗಿ ಎಲ್ಲವನ್ನೂ ಕೂಡ ಬೋರ್ಡಿಗೇ ವಹಿಸಿದ್ದರೆ ಚೆನ್ನಾಗಿತ್ತು. ಈ ಎರಡೂ ಮಾಡಿಲ್ಲ. ಸರಕಾರದವರು ತಾವು ಅರ್ಧ ಉಳಿಸಿಕೊಂಡು ಉಳಿದ ಅರ್ಧವನ್ನು ಬೋರ್ಡಿಗೆ ಕೊಟ್ಟಿರುವುದು ಸರಿಯಲ್ಲ. ಬೋರ್ಡಿನವರು ಕೇವಲ ದಳ್ಳಾಳಿ ವ್ಯಾಪಾರ ಮಾಡುತ್ತಿದ್ದಾರೆಯೇ ಹೊರತು ಇರುವ ಪವರನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೆ ಇರುವ ಅವಕಾಶವನ್ನು ತೋರಿಸಿ ಅದಕ್ಕೆ ಸಹಾಯ ಮಾಡದೆ ಕುಂಠಿಸಿದ್ದಾರೆ. ಪೂರ್ಣ ಜವಾಬ್ದಾರಿಯನ್ನು ಬೋರ್ಡಿನವರಿಗಾದರೂ ಕೊಡಬೇಕು ಅಥವಾ ಸರಕಾರವಾದರೂ ಇಟ್ಟುಕೊಳ್ಳಬೇಕು. ಈ ದಿವಸ ಬೃಹತ್ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಿದ್ದೇವೆ. ಆದರೆ ವಿವೇಕಯುತವಾಗಿ ಅದರ ವಿತರಣೆ ನಡೆಯುತ್ತಿದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ಹಾಗೆ ವಿತರಣೆಯಾಗುತ್ತಿಲ್ಲ. ಮನಸ್ಸಿಗೆ ಬಂದ ಹಾಗೆ ವಿತರಣೆ ಮಾಡುವುದು ಸರಿಯಲ್ಲ. ಈಗ ಸಾಮಾನ್ಯವಾಗಿ ಶ್ರೀಮಂತರು ತಮ್ಮ ಭೋಗವಿಲಾಸಗಳಿಗೆ ಮನ ಬಂದ ಹಾಗೆ ವಿದ್ಯುಚ್ಛಕ್ತಿಯನ್ನು ಬಳಸಲು ಅವಕಾಶ ದೊರೆತಿದೆಯೇ ಹೊರತು ಸಾಮಾನ್ಯ ಜನರ ಅವಶ್ಯಕತೆಗಳಿಗೆ ನಿತ್ಯ ಉಪಯೋಗಕ್ಕೆ ಬೇಕಾದಷ್ಟು ಒದಗಿಸಲು ಸಾಧ್ಯವಾಗಿರುವುದಿಲ್ಲ. ನಿತ್ಯ ಜೀವನದ ಅವಶ್ಯಕತೆಗೆ ಪೂರೈಕೆಯಾಗಬೇಕಾದರೆ ಕೈಗಾರಿಕೆಗಳು ಮುಂದುವರೆಯಲು, ವ್ಯವಸಾಯ ಮತ್ತು ಟ್ರಾನ್ಸ್‌ಪೋರ್ಟು ಮುಂದುವರೆಯಲು ಎಷ್ಟುಮಟ್ಟಿಗೆ ವಿದ್ಯುಚ್ಛಕ್ತಿ ಉಪಯೋಗವಾಗುತ್ತಿದೆ ಎಂಬುದನ್ನು ನೋಡಬೇಕು. ಬೋರ್ಡಿನವರು ಕೇಳಿದವರಿಗೆ ಬೇಕಾದ ಹಾಗೆ ಕೊಡುವುದು ಸರಿಯೆ? ಶರಾವತಿಯಲ್ಲಿ ಉತ್ಪತ್ತಿಯಾಗುವ ಪವರನ್ನು ಹೇಗೆ ಉಪಯೋಗ ಮಾಡಬೇಕು, ಕೈಗಾರಿಕೆಗಳನ್ನು ಎಲ್ಲಿ ಸ್ಥಾಪಿಸಬೇಕು, ದೇಶದ ಹಿತದೃಷ್ಟಿಯಿಂದ ಎಲ್ಲಿ ಯಾವ ಕೈಗಾರಿಕೆ ಸ್ಥಾಪಿಸಿದರೆ ಅನುಕೂಲ ಎಂದು ಆಲೋಚಿಸಿ ಅದಕ್ಕೆ ತಕ್ಕ ಕ್ರಮವನ್ನು ಬೋರ್ಡು ಅಥವಾ ಸರಕಾರ ಕೈಕೊಳ್ಳಬೇಕು. ಬೋರ್ಡು ಮತ್ತು ಸರಕಾರ ಮಿಲನವಾಗಿ ತಜ್ಞರ ಸಮಿತಿ ಮಾಡಿ ಅಥವಾ ಬೋರ್ಡಿನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ ಶರಾವತಿಯಲ್ಲಿ ಮತ್ತು ಇತರ ಕಡೆಗಳಲ್ಲಿ ಉತ್ಪತ್ತಿ ಮಾಡುವ ವಿದ್ಯುತ್ತನ್ನು ಯಾವ ರೀತಿ ವಿನಿಯೋಗಮಾಡಬೇಕೆಂಬುದನ್ನು ತೀರ್ಮಾನಿಸಬೇಕು. ಈಗ ಹಾಗೆ ಮಾಡಲು ಸಾಧ್ಯವಾಗದಿದ್ದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಕೂಡ ಒಂದು ಪ್ಲಾನು ಹಾಕಿ ಹೇಗೆ ಮಾಡಿದರೆ ದೇಶಾಭಿವೃದ್ಧಿಯಾಗುವುದೆಂಬುದನ್ನು ಯೋಚಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇತರ ದೇಶಗಳವರು ಅದನ್ನು ಉಪಯೋಗಿಸಿಕೊಳ್ಳಲು ಅವಕಾಶವಾಗಿ ಮುಂದಿನ ಜನಾಂಗ ಖಂಡಿತವಾಗಿಯೂ ನಮ್ಮನ್ನು ದೂಷಣೆ ಮಾಡುತ್ತಾರೆ. ಅದಕ್ಕೆ ಅವಕಾಶ ಕೊಡಬಾರದು.

ನಮ್ಮ ಮುಂದಿರುವ ವಿದ್ಯುಚ್ಛಕ್ತಿ ಬಡ್ಜೆಟ್ಟನ್ನು ನೋಡಿದರೆ ಅದು ಕಾನೂನುಬದ್ಧವಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಎಲೆಕ್ಟ್ರಿಸಿಟಿ ರೂಲ್ಸ್‌ನಲ್ಲಿ 61ನೆ ನಿಯಮದ ಪ್ರಕಾರ ಬಜೆಟ್ಟನ್ನು ಮಂಡಿಸಬೇಕು ಎಂದು ಹೇಳಿದ್ದಾರೆ. ಅದಕ್ಕೆ ತಕ್ಕಂತೆ ಇದನ್ನು ಮಂಡಿಸಿಲ್ಲ. ಅದಕ್ಕೆ ಒಂದೆರಡು ಉದಾಹರಣೆ ಮಾತ್ರ ಕೊಡುತ್ತೇನೆ. Statistical data to be furnished in the form specified in Appendix D. ಎಂದು ಇದೆ. ಅಪೆಂಡಿಕ್ಸ್ 'ಡಿ' ನಲ್ಲಿ ಕೆಲವು ಫಾರಂಗಳಿವೆ. ಆ ಫಾರಂ ಪ್ರಕಾರ ಬಜೆಟ್ಟನ್ನು ಮಂಡಿಸಿಲ್ಲ. ಇದು ಒಬ್ಬ ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವ ರೀತಿಯಲ್ಲಿಲ್ಲ.

SRI B. D. JATTI.—These forms suggested by the Hon'ble Member will be introduced from 1966-67. That has been decided.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಆಂಧ್ರ ಪ್ರದೇಶದ ಎಲೆಕ್ಟ್ರಿಸಿಟಿ ಬೋರ್ಡಿನವರು ಈ ಫಾರಂಗಳನ್ನನುಸರಿಸಿ ಬಜೆಟ್ಟನ್ನು ಮಂಡಿಸಿದ್ದಾರೆ? ಅದು ಬಹಳ ಸ್ಪಷ್ಟವಾಗಿದೆ. ಆದರೆ ನಮ್ಮ ಮುಂದೆ ಇರುವ ಬಜೆಟ್ ಅಷ್ಟು ಸ್ಪಷ್ಟವಾಗಿಲ್ಲ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ಸಲಹೆಯಂತೆ ಮಾಡಲು ತೀರ್ಮಾನ ತೆಗೆದು ಕೊಂಡಿದೆ. ಮುಂದಿನ ವರ್ಷದಿಂದ ಆ ಪ್ರಕಾರವೇ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಕೆಲವು ವಿಷಯಗಳನ್ನು ಇದರಲ್ಲಿ ಕೈಬಿಟ್ಟಿದ್ದಾರೆ. Review of the work of the Council. ಇದನ್ನು ನಮಗೆ ರೂಲ್ಸ್ ಪ್ರಕಾರ ಕೊಟ್ಟಿ ದ್ದಾರೆಯೇ ಎಂದು ಕೇಳುತ್ತೇನೆ.

Particulars regarding education, training facilities and welfare schemes for the staff and labour of the Board. ಎಂದಿದೆ. ಈ ವಿಷಯದಲ್ಲಿಯೂ ನಮಗೆ ಏನು ಮಾಹಿತಿಯನ್ನು ಕೊಟ್ಟಿದ್ದಾರೆ? ಹೀಗೆ ಅನೇಕ ಗುರುತರವಾದ ವಿಷಯಗಳನ್ನು ಕೈಬಿಟ್ಟು, ಒಂದು ಸ್ಟೇಟ್‌ಮೆಂಟನ್ನು ಅಸೆಂಬ್ಲಿ ಮುಂದೆ ಇಡಬೇಕೆಂದು ಇಟ್ಟಿದ್ದಾರೆ. ಈ ತರಹ ಮಾಡಿದರೆ ಯಾವುದೂ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ನಮ್ಮಲ್ಲಿ ಟ್ರಾನ್ಸ್‌ಮಿಷನ್ ಲೈನ್ ಎಷ್ಟಿದೆ, 440 ಕೆ.ವಿ. ಲೈನ್ ಎಷ್ಟು ಇದೆ—ನಮ್ಮಲ್ಲಿ ಇದು ಇಲ್ಲವೇ ಇಲ್ಲ ಎಂದು ಕಾಣುತ್ತದೆ—220 ಕೆ.ವಿ. ಲೈನ್, 110 ಕೆ.ವಿ. ಲೈನ್ ಎಷ್ಟು ಮೈಲಿ ಉದ್ದ ಇದೆ, ಸ್ಟೋರ್ಸ್‌ನಲ್ಲಿ ಏನೇನು ಇದೆ, ಯಾವ ಸಾಮಾನು ಎಷ್ಟಿದೆ, ಎಷ್ಟು ಕಂಬಗಳಿವೆ, ಬೇರೆ ಸಾಮಾನು ಎಷ್ಟಿದೆ, ಒಟ್ಟು ಎಷ್ಟಿದೆ, ಅದರಲ್ಲಿ ಡಿಪ್ರೀಸಿಯೇಷನ್ ಎಷ್ಟು ಹೋಗಬೇಕು ಎನ್ನುವುದನ್ನು ಕೊಟ್ಟರೆ ನಮಗೆ ಗೊತ್ತಾಗುತ್ತದೆ. ಇಲ್ಲದೆ ಇದ್ದರೆ ಈ ವಿಚಾರಗಳು ನಮಗೆ ಗೊತ್ತಾಗುವುದಿಲ್ಲ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಬಜೆಟ್ ಜೊತೆಯಲ್ಲಿ ಒಂದು ಮೆಮೊರಾಂಡಂ ಕೊಡುವಂತೆ ಇದರ ಜೊತೆಯಲ್ಲಿಯೂ ಕೊಡಬೇಕು ಎಂದು ಹೇಳುತ್ತಾರೆ. ಅದನ್ನು ಮುಂದಿನ ವರ್ಷದಿಂದ ಕೊಡುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಬಜೆಟ್ಟಿನಲ್ಲಿ 56ನೆಯ ಪುಟವನ್ನು ನೋಡಿದರೆ ಅದರಲ್ಲಿ ನಮಗೆ ಸ್ವಲ್ಪ ಗಾಬರಿ ಆಗುತ್ತದೆ. ಅದಕ್ಕೆ ಕಾರಣವೇನು ಎಂದು ತಿಳಿಸುತ್ತೇನೆ. ಆಪರೇಷನ್ ಮತ್ತು ಮೇಂಟೆನೆನ್ಸ್ ಮತ್ತು ಜನರಲ್ ಎಸ್ಟಾಬ್ಲಿಷ್‌ಮೆಂಟ್ ಇವುಗಳ ದಾಮಾಷಾ ಕೆಲವು ಜಿಲ್ಲೆಗಳಲ್ಲಿ ಬಹಳ ಹೆಚ್ಚಾಗಿದೆ. ತುಮಕೂರು ಜಿಲ್ಲೆಯಲ್ಲಿ ಆಪರೇಷನ್ ಮತ್ತು ಮೇಂಟೆನೆನ್ಸ್ 2 ಲಕ್ಷ ರೂಪಾಯಿ ಇದ್ದರೆ ಸಿಬ್ಬಂದಿಯ ವೆಚ್ಚ 8 ಲಕ್ಷ 50 ಸಾವಿರ ರೂಪಾಯಿ ಇದೆ. ಬೆಂಗಳೂರು ಸಿವಿಲ್ ಪ್ರದೇಶದಲ್ಲಿ ಆಪರೇಷನ್ ಚಾರ್ಜಸ್ 5,70,000 ರೂಪಾಯಿ ಇದ್ದರೆ ಸಿಬ್ಬಂದಿ ಖರ್ಚು 14,50,000 ರೂಪಾಯಿ ಇದೆ. ಇದರಲ್ಲಿ ನಮಗೆ ಸ್ವಲ್ಪ ಅನುಮಾನವಾಗಿದೆ. ಇವೆರಡಕ್ಕೂ ಒಂದು ದಾಮಾಷೇ ಇರಬೇಕು. ಬೇರೆ ದೇಶಗಳಲ್ಲಿ ಇವೆರಡರ ದಾಮಾಷಾ ಯಾವ ಪ್ರಕಾರವಾಗಿದೆ ಎಂದು ನೋಡಿದರೆ ನಮ್ಮ ದಾಮಾಷಾ ವಿಪರೀತವಾಗಿದೆ. ಇದರಲ್ಲಿ ತಪ್ಪು ಎಲ್ಲಿದೆ ಎಂದು ನೋಡ ಬೇಕು. ನಾವು ಕೊಡುವ ಸಂಬಳಗಳು ಜಾಸ್ತಿಯೇ, ಕೆಲಸ ಮಾಡುವವರ ಸಂಖ್ಯೆ ಜಾಸ್ತಿ ಇದ್ದು ಅವರು ಮಾಡುವ ಕೆಲಸ ಕಡಮೆಯೇ ಎನ್ನುವ ವಿಚಾರದಲ್ಲಿ ನಮಗೆ ಗಾಬರಿಯಾಗಿದೆ. ಇದನ್ನು ಸ್ಪಷ್ಟೀಕರಣ ಮಾಡಬೇಕು. ಮುಂದಿನ ವರ್ಷವಾದರೂ ಇದನ್ನು ಸರಿಯಾದ ರೀತಿಯಲ್ಲಿರುವಂತೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಪಂಪ್‌ಸೆಟ್‌ಗಳ ವಿಷಯದಲ್ಲಿ ಖಚಿತವಾದ ವಿವರಗಳಿಲ್ಲ. ಪಂಪ್‌ಸೆಟ್‌ಗಳಿಗಾಗಿ ಎಷ್ಟು ಜನರು ಹಣವನ್ನು ಡಿಪಾಜಿಟ್ ಮಾಡಿದ್ದಾರೆ, ಎಷ್ಟು ಅಂದಾಜುಗಳಾಗಿವೆ, ಅದು ಎಷ್ಟು ಡಿಪಾಜಿಟ್ ಮಾಡಿರುವುದನ್ನು ಒಳಗೊಳ್ಳುತ್ತದೆ, ಅದಕ್ಕೆ ಎಷ್ಟು ದುಡ್ಡು ಬೇಕು, ಎಷ್ಟು ದಿವಸಗಳೊಳಗಾಗಿ ಪೂರೈಕೆ ಮಾಡರಾಗುತ್ತದೆ ಎನ್ನುವುದನ್ನೆಲ್ಲ ಹೇಳಬೇಕು. ಈ ವಿವರಗಳನ್ನು ಮುಂದಿನ ವರ್ಷ ವಾದರೂ ಒದಗಿಸಬೇಕು ಎಂದು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಲು ರೈತರ ಹತ್ತಿರ ದುಡ್ಡು ಇರುವುದಿಲ್ಲ. ಪಂಪುಗಳನ್ನು ಕೊಂಡುಕೊಳ್ಳುವುದಕ್ಕೆ, ಪಂಪ್ ಹಾಕಿಸುವುದಕ್ಕೆ ದುಡ್ಡು ಬೇಕು. ಈಗಿನ ಆರ್ಥಿಕ ಮುಗ್ಗಟ್ಟಿನಲ್ಲಿ ಸಾಮಾನ್ಯ ರೈತನಿಗೆ ಇದನ್ನೆಲ್ಲ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಮೇರಿಕಾ ದೇಶದಲ್ಲಿ ರೂರಲ್ ಎಲೆಕ್ಟ್ರಿಕಲ್ ಕೋ-ಆಪರೇಟಿವ್ಸ್ ಎಂದು ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಬಾವಿಯನ್ನು ತೋಡಿಸಿಕೊಳ್ಳಲು, ಪಂಪ್‌ಸೆಟ್ ತೆಗೆದುಕೊಳ್ಳಲು, ವೈರಿಂಗ್ ಮಾಡಿಸಿ ಕೊಳ್ಳಲು ಸಾಲ ಕೊಟ್ಟು ಸುಲಭ ಕಂತುಗಳಲ್ಲಿ ವಸೂಲು ಮಾಡಿಕೊಳ್ಳುತ್ತಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಸರ್ಕಾರದವರಾಗಲೀ, ಎಲೆಕ್ಟ್ರಿಸಿಟಿ ಬೋರ್ಡ್‌ನವರಾಗಲೀ ರೂರಲ್ ಎಲೆಕ್ಟ್ರಿಕಲ್ ಕೋ-ಆಪರೇಟಿವ್ಸ್ ಸ್ಥಾಪನೆ ಮಾಡಿ ಅದರ ಮೂಲಕ ಹೆಚ್ಚು ಹಳ್ಳಿಯ ಜನರನ್ನು ಉದ್ಧಾರ ಮಾಡ ಬೇಕೆಂದು ಸಲಹೆ ಮಾಡುತ್ತೇನೆ.

ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಕಲಗಿ).—ಮಾನ್ಯ ಸಭಾಪತಿಗಳೇ, ವಿದ್ಯುಚ್ಛಕ್ತಿ ಬೋರ್ಡ್ ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ನೋಡಿದರೆ ಕೆಲವೊಂದು ಜಿಲ್ಲೆಗಳಲ್ಲಿ ಮಾತ್ರ ಅತಿ ವೇಗದಿಂದ ಮತ್ತು ತೃಪ್ತಿಕರವಾಗಿ ಕೆಲಸ ನಡೆದಿದೆ, ಇನ್ನು ಕೆಲವು ಜಿಲ್ಲೆಗಳಲ್ಲಿ ಅದರ ಕೆಲಸ ಮತ್ತು ಸಾಧನೆಯನ್ನು ನೋಡಿದರೆ ಬಹಳ ತೃಪ್ತಿಕರವಾಗಿಲ್ಲ ಮತ್ತು ನಿಧಾನವಾಗಿ ನಡೆದಿದೆ. ಅವರು ಕೊಟ್ಟಿರತಕ್ಕ ಆಯವ್ಯಯ ಪಟ್ಟಿಯನ್ನು ನೋಡಿದರೆ ಪುಟ ಎಂಟರಲ್ಲಿ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ ವಿವರಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಕೆಲವೊಂದು ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯಲ್ಲಿ 7,492, ತುಮಕೂರು ಜಿಲ್ಲೆಯಲ್ಲಿ 5,262, ಚಿತ್ರದುರ್ಗ ಜಿಲ್ಲೆಯಲ್ಲಿ 3,899, ಹೀಗೆ ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ. ಆದರೆ ಹೈದರಾಬಾದ್ ಕರ್ಣಾಟಕದ ಭಾಗದಲ್ಲಿ ನೋಡಿದರೆ ಗುಲ್ಬರ್ಗ ಜಿಲ್ಲೆಯಲ್ಲಿ 29, ಬಿದರೆಯಲ್ಲಿ 2 ಮತ್ತು ರಾಯಚೂರಿನಲ್ಲಿ 20 ಕೊಟ್ಟಿದ್ದಾರೆ. ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳ ಹೆಸರೇ ಇದರಲ್ಲಿಲ್ಲ. ಹಾಗೆಯೇ ಈ ಬೋರ್ಡಿನವರು ಯಾವ ರೀತಿಯಲ್ಲಿ ಕೆಲಸ ಮಾಡಿದ್ದಾರೆ ಎಂದರೆ ಹೈದರಾಬಾದ್ ಕರ್ಣಾಟಕ ಮತ್ತು ಬೊಂಬಾಯಿ ಕರ್ಣಾಟಕ ಪ್ರದೇಶದ ಭಾಗಗಳನ್ನು ಅಲಕ್ಷ್ಯ ಮಾಡಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಇದೇ ರೀತಿಯಾಗಿ Statement of towns and villages electrified in each district upto October 1964. ಎನ್ನುವ ಸ್ಟೇಟ್‌ಮೆಂಟನ್ನು ನೋಡಿದರೂ ಸಹ ಗೊತ್ತಾಗುತ್ತದೆ. ಅದರಲ್ಲಿ ಬೆಂಗಳೂರಿನಲ್ಲಿ 902, ಮೈಸೂರು ಜಿಲ್ಲೆಯಲ್ಲಿ 375, ಮಂಡ್ಯ ಜಿಲ್ಲೆಯಲ್ಲಿ 268, ತುಮಕೂರು ಜಿಲ್ಲೆಯಲ್ಲಿ 553, ಕೋಲಾರ ಜಿಲ್ಲೆಯಲ್ಲಿ 890 ಹೀಗೆ ಕೆಲವೊಂದು ಜಿಲ್ಲೆಗಳಲ್ಲಿ ಮಾತ್ರ ಹೆಚ್ಚು ರೂರಲ್ ಎಲೆಕ್ಟ್ರಿಫಿಕೇಷನ್ ಆಗಿದೆ. ಅದೇ ಹೈದರಾಬಾದ್ ಕರ್ಣಾಟಕ ಭಾಗವನ್ನು ನೋಡಿದರೆ ಬಿದರೆ ಜಿಲ್ಲೆಯಲ್ಲಿ 6, ರಾಯಚೂರಿನಲ್ಲಿ 48 ಮತ್ತು ಗುಲ್ಬರ್ಗದಲ್ಲಿ 11 ಗ್ರಾಮಗಳು ಹೀಗೆ ಆಗಿದೆ. ಈ ರೀತಿಯಾಗಿ ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿಯೂ, ನೀರಾವರಿ ಪಂಪ್‌ಸೆಟ್‌ಗಳ ಪೂರೈಕೆಯ ವಿಷಯದಲ್ಲಿಯೂ ನಮ್ಮ ಹೈದರಾಬಾದ್ ಭಾಗ ಬಹಳ ಹಿಂದುಳಿದಿದೆ; ಮತ್ತು ಅದನ್ನ ಅಲಕ್ಷ್ಯ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಬಹಳ ವ್ಯಸನದಿಂದ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲ್ ಅವರು ಎರಡು ವರ್ಷದಿಂದ ಬಹಳ ಪ್ರಯತ್ನ ಪಟ್ಟರೂ ಕೂಡ ಆ ಭಾಗದಲ್ಲಿರತಕ್ಕ ಸಿಬ್ಬಂದಿ, ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ ಇವರಲ್ಲಿ ಕೆಲಸವನ್ನು ಸೇವಾಭಾವನೆ ಇಲ್ಲದೆ ಇರುವುದರಿಂದ ಕೆಲಸವಾಗಿಲ್ಲ. ರೈತರ ಆದಾಯ ಹೆಚ್ಚಾಗಬೇಕು, ರೈತರ ಉತ್ಪಾದನೆ ಹೆಚ್ಚಾಗಬೇಕು, ಎಂದು ಹೇಳುತ್ತೇನೆ. ಆದರೆ ಈ ರೀತಿಯಲ್ಲಿ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂದು ಹೇಳುವಂತೆ ಒಂದು ಭಾಗದ ರೈತರಿಗೆ ಹೆಚ್ಚು ಅನುಕೂಲತೆಗಳನ್ನು ಕೊಟ್ಟು ಇನ್ನೊಂದು ಭಾಗದವರಿಗೆ ಅದೇ ಅನುಕೂಲತೆಗಳನ್ನು ಕೊಡದೇ ಹೋದರೆ ಸರ್ವತೋಮುಖವಾಗಿ ಅಭಿವೃದ್ಧಿಯಾಗಲಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದುದರಿಂದ ಈಗ ನಾನು ಸೂಚಿಸುವುದು, ಈ ಎರಡು ವರ್ಷವಾದರೂ ಕೂಡ ನಮ್ಮ ಭಾಗಕ್ಕೆ ಹೆಚ್ಚು ಲಕ್ಷ್ಯ ಕೊಡಬೇಕು, ಹೆಚ್ಚು ನೀರಾವರಿ ಪಂಪ್‌ಸೆಟ್ಟುಗಳನ್ನು ಕೊಟ್ಟು ರೂರಲ್ ಎಲೆಕ್ಟ್ರಿಫಿಕೇಷನ್ ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯ ವಿಷಯ. ನಾವು ಪ್ರತಿಯೊಂದು ವಿಷಯಕ್ಕೂ ಬಳ್ಳಾರಿ ಜಿಲ್ಲೆಗೇ ಹೋಗಬೇಕಾಗುತ್ತದೆ. ಏಕೆಂದರೆ ಸೂಪರಿಂಟೆಂಡೆಂಟ್, ಎಲೆಕ್ಟ್ರಿಕ್ ಇಂಜನಿಯರಿಂಗ್ ಆಫೀಸು ಬಳ್ಳಾರಿಯಲ್ಲಿದೆ. ಆದರೆ ನಮ್ಮ ಭಾಗದ ಮೂರು ಜಿಲ್ಲೆಗಳಿಗೆ ಅನುಕೂಲವಾಗಬೇಕಾದರೆ ಗುಲ್ಬರ್ಗಾ ಡಿವಿಜನ್ನಿನಲ್ಲಿ ಒಂದು ಹೆಡ್‌ಕ್ವಾರ್ಟರ್ಸ್ ಆಗಬೇಕಾಗಿದೆ. ಸೂಪರಿಂಟೆಂಡೆಂಟ್, ಎಲೆಕ್ಟ್ರಿಕಲ್ ಇಂಜನಿಯರಿಂಗ್ ಆಫೀಸು ಅಲ್ಲಿಂದ ಷಿಫ್ಟ್ ಆದರೆ ಈ ಮೂರು ಜಿಲ್ಲೆಗಳಿಗೂ ಅನುಕೂಲವಾಗುತ್ತದೆ. ಆದ್ದರಿಂದ ಬಳ್ಳಾರಿಯಲ್ಲಿರುವ ಸೂಪರಿಂಟೆಂಡಿಂಗ್ ಇಂಜಿನಿಯರ್ ಎಲೆಕ್ಟ್ರಿಕ್ ಇಂಜಿನಿಯರಿಂಗ್ ಆಫೀಸನ್ನು ಗುಲ್ಬರ್ಗಾಕ್ಕೆ ಷಿಫ್ಟ್ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಏನು ಇವೆ ಅವಕ್ಕೆ ಹೈದರಾಬಾದ್ ಕರ್ಣಾಟಕದಲ್ಲಿ ಇದುವರೆಗೆ ವಿದ್ಯುಚ್ಛಕ್ತಿ ಕೊಟ್ಟಿಲ್ಲ. ಅಲ್ಲಿನ ಜನರು ಅದನ್ನು ಕೇಳಿದರೆ ಇವರು ನಿಮಗೆ ತುಂಗಭದ್ರಾ ಪ್ರಾಜೆಕ್ಟ್‌ನಿಂದ ಹೈಡ್ರೋ ಎಲೆಕ್ಟ್ರಿಕ್ ಪವರ್‌ಗಳಿಂದ ವಿದ್ಯುಚ್ಛಕ್ತಿ ಬಂದರೆ ಕೊಡುತ್ತೇವೆಂದು ಹೇಳುತ್ತಾರೆ. ಎರಡು ಯೂನಿಟ್ಟುಗಳಿಂದ ಸಂಪೂರ್ಣ ವಿದ್ಯುಚ್ಛಕ್ತಿಯಾಗಿದೆ. ಆದರೂ ಇದುವರೆಗೆ ಪವರ್ ಕೊಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ಎಲೆಕ್ಟ್ರಿಸಿಟಿ ಬೋರ್ಡಿನವರು ಯೋಚನೆ ಮಾಡಿ ಆದಷ್ಟು ಬೇಗನೆ ಪವರ್ ಕೊಡಬೇಕೆಂದು ಸಲಹೆ ಮಾಡುತ್ತೇನೆ.

(ಶ್ರೀ ಎಸ್. ರುದ್ರಪ್ಪ)

ಮೂರನೆಯದಾಗಿ ಪ್ರತಿಯೊಬ್ಬ ರೈತನೂ ವಿದ್ಯುಚ್ಛಕ್ತಿಗಾಗಿ ಸಾಕಷ್ಟು ಡಿಪಾಜಿಟ್ ಕೊಟ್ಟಿದ್ದಾನೆ. ಪ್ರತಿಯೊಂದು ತಾಲ್ಲೂಕಿನಿಂದ 50 ಅರ್ಜಿಗಳನ್ನು ಹಾಕಿದ್ದಾನೆ. ಆದ್ದರಿಂದ ಐ. ಪಿ. ಸೆಟ್ಟುಗಳಿಗೋಸ್ಕರ ರೈತರಿಗೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಅಲ್ಲಿನ ಸಿಬ್ಬಂದಿ ಬಗ್ಗೆ ಹೇಳುವದಾದರೆ, ಅವರು ಸಾಕಷ್ಟು ಲಕ್ಷ್ಯ ಕೊಟ್ಟಿಲ್ಲವೆಂದು ಮಾನ್ಯ ಮಂತ್ರಿಗಳಿಗೆ ಈಗಾಗಲೇ ಹೇಳಿದ್ದೇನೆ. ಆದರೂ ಇದುವರೆಗೆ ಅದು ಕಾರ್ಯ ರೂಪಕ್ಕೆ ಬಂದಿಲ್ಲ. ತುಂಗಭದ್ರಾ, ಹೈಡ್ರೋ ಎಲೆಕ್ಟ್ರಿಕ್ ಪವರ್ ಇದರಲ್ಲಿ ಎರಡು ಯೂನಿಟ್ ಕಮಿಷನ್ನುಗಳಾಗಿವೆ. ಇನ್ನೊಂದು ಯೂನಿಟ್ ಕಮಿಷನ್ ಆಗಬೇಕಾಗಿದೆ. ಆದರೆ ಮಾನ್ಯ ಮಂತ್ರಿಗಳನ್ನು ತುಂಗಭದ್ರಾ ಹೈಡ್ರೋ ಎಲೆಕ್ಟ್ರಿಕ್ ಪವರ್‌ನಿಂದ ಎಷ್ಟು ಕೋಟಾ ಬಂದಿದೆ, ಎಷ್ಟು ವೇಸ್ಟ್ ಆಗುತ್ತಿದೆಂಬ ಮಾಹಿತಿಯನ್ನು ನನಗೆ ಒದಗಿಸಬೇಕೆಂದು ಕೇಳುತ್ತೇನೆ. ಈ ಮೂರು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದೆ ಇರತಕ್ಕಂಥ ಈ ಅನ್ಯುಯಲ್ ಫೈನಾನ್‌ಷಿಯಲ್ ಸ್ಟೇಟುಮೆಂಟುಗಳ ಬಗ್ಗೆ ಎರಡು ಮಾತುಗಳನ್ನು ಆಡುವುದಕ್ಕೆ ಇಚ್ಛಿಸುತ್ತೇನೆ. ಪ್ರಥಮವಾಗಿ ಸರ್ಕಾರ ವಿದುಚ್ಛಕ್ತಿ ಬೋರ್ಡ್ ಎಂದು ಮಾಡಿದ್ದಾರೆ. ಅರಿತು ನುರಿತಂಥ ಅಧಿಕಾರಿಯನ್ನು, ಅದರ ಚೇರ್‌ಮನ್ನರ ಪದವಿಗೆ ನಾಮಿನೇಟ್ ಮಾಡಿರುವುದು ಬಹಳ ಸ್ವಾಗತಾರ್ಹವಾದ ವಿಷಯ. ಆದರೆ ಈಗ ರಾಜಕೀಯ ಹಿನ್ನಲೆಯನ್ನು ಇಟ್ಟುಕೊಂಡು ಮಾಡುವಂಥ ಪದ್ಧತಿ ಹೋಯಿತಲ್ಲಾ ಎಂದು ನಾನು ಈ ಸಂದರ್ಭದಲ್ಲಿ ಸಂತೋಷದಿಂದ ಹೇಳುತ್ತೇನೆ.

ಪಂಪ್ ಸೆಟ್‌ಗಳ ವಿತರಣೆಯಲ್ಲಿ ಅನೇಕ ನ್ಯೂನತೆಗಳಿವೆ. ರೈತರು ಬಾವಿಗಳನ್ನು ತೋಡಿಸಿಕೊಂಡು ಕರೆಂಟನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೂ ಕೂಡ, ಅನೇಕ ವರ್ಷಗಳಾದರೂ ಕಂಬ ಇಲ್ಲ, ಅಥವಾ ವೈರ್ ಇಲ್ಲವೆಂದು ನಾನಾ ರೀತಿಯಲ್ಲಿ ವರ್ಷಾನುಗಟ್ಟಲೆ ತಡಮಾಡುತ್ತಿದ್ದಾರೆ. ಅದನ್ನು ಕಾಲಕಾಲಕ್ಕೆ ಸರಿಯಾಗಿ ರೈತನಿಗೆ ಒದಗಿಸುತ್ತಾ ಇಲ್ಲ. ಮತ್ತೆ ಅದನ್ನು ಹಂಚುವುದರಲ್ಲಿಯೂ ಕೂಡ ಅಧಿಕಾರಿಗಳು ತಮಗೆ ಮನಸ್ಸು ಬಂದ ರೀತಿಯಲ್ಲಿ ಆರ್ಡರ್ ಆಫ್ ಪ್ರೈಯಾರಿಟಿಯಲ್ಲಿ ಕೊಡತಕ್ಕ ವ್ಯವಸ್ಥೆಯನ್ನು ತಪ್ಪಿಸಿ ತಮ್ಮ ಮನ ಬಂದಂತೆ ಅನೇಕ ಸಂದರ್ಭಗಳಲ್ಲಿ ಈ ಪಂಪು ಸೆಟ್ಟುಗಳನ್ನು ಹಂಚುವುದು ಇಲ್ಲಿ ಕಂಡುಬರುತ್ತಾ ಇದೆ. ಇನ್ನು ಕೆಲವು ಕಡೆಗಳಲ್ಲಿ ಕರೆಂಟ್ ಮಂಜೂರಾಗಿ ವರ್ಷಾನುಗಟ್ಟಲೆಯಾದರೂ ಕೂಡ ಒಂದು ಕಡೆ ಕಂಬ ನೆಡುತ್ತಾರೆ ಆಮೇಲೆ ವರ್ಷಾನುಗಟ್ಟಲೆಯಾದರೂ ಕೂಡ ವೈರ್ ಇಲ್ಲವೆಂದು ಕೆಲಸವನ್ನೇ ನಿಲ್ಲಿಸಿರುತ್ತಾರೆ. ರೈತರು ಬಾವಿ ತೆಗೆದುಕೊಂಡು ವರ್ಷಾನುಗಟ್ಟಲೆಯಾದರೂ ಕೂಡ ಇನ್ನೂ ಕಂಬ ನೆಡಬೇಕೆಂದು ಸಮಾಧಾನ ಪಡಿಸುವ ಸ್ಥಿತಿ ಇದೆ. ಇದು ಬಹಳ ಅನ್ಯಾಯ. ಇದನ್ನು ಮಂಜೂರು ಮಾಡುವ ಉದ್ದೇಶವಾದರೂ ಕೂಡ ರೈತ ಆದಷ್ಟು ಕರೆಂಟನ್ನು ಉಪಯೋಗಿಸಿಕೊಂಡು ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂಬುದು. ಆ ಒಂದು ಉದ್ದೇಶದಿಂದ ಅಂದಾಜುಗಳು ಮಂಜೂರಾಗುತ್ತವೆ. ಆ ಉದ್ದೇಶ ಸಫಲವಾಗಬೇಕಾದರೆ ತಮ್ಮ ನೀತಿ ಏನಿದೆ ರೈತನಿಗೆ ಬೇಕಾದ ಸಾಮಾನುಗಳನ್ನು ಒದಗಿಸುವುದು ಅದಕ್ಕೆ ಸಾಕಷ್ಟು ನಿಗಾ ಕೊಡುತ್ತಿಲ್ಲ. ಇದಕ್ಕಾಗಿ ಶ್ರೀಮಾನ್ ಅವಲರೆಡ್ಡಿಯವರು ಹೇಳಿದಂತೆ ಸರ್ಕಾರದವರು ತಮ್ಮದೇ ಆದಂಥ ಒಂದು ವೈರನ್ನು ತಯಾರು ಮಾಡತಕ್ಕ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಯೋಚಿಸಿದ್ದಾರೆ. ಆ ಬಗ್ಗೆ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಆ ರೀತಿಯಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಈ ಕಾರ್ಯವನ್ನು ಪ್ರಾರಂಭ ಮಾಡದೇ ಹೋದರೆ ಇನ್ನು ಈ ಕರೆಂಟ್ ಏನಿದೆ ಅದನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ಅನೇಕ ಸಂದರ್ಭಗಳಲ್ಲಿ ನಮ್ಮ ತಾಲ್ಲೂಕು ಮತ್ತು ನಮ್ಮ ಜಿಲ್ಲೆಗಳಲ್ಲಿ ಕೆಲವು ಅಂದಾಜುಗಳು ವರ್ಷಾನುಗಟ್ಟಲೆ ಮಂಜೂರಾಗಿ ಹಾಗೆಯೇ ನಿಂತಿವೆ. ಹಾಗೆ ನಿಂತ ಕಾರ್ಯಗಳನ್ನು ಮುಂದುವರಿಸುವುದಕ್ಕೆ ಈ ರೀತಿ ಅಡ್ಡಿಯಾಗಿರತಕ್ಕ ಸನ್ನಿವೇಶಗಳನ್ನು ಬೋರ್ಡಿನ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೂ ಅಧಿಕಾರಿಗಳಾದರೋ ಅನೇಕ ಸಂದರ್ಭಗಳಲ್ಲಿ ತಮ್ಮ ಅಶಕ್ತತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅದರಲ್ಲೂ ವೈರ್‌ಗಳಿಲ್ಲ, ಟ್ರಾನ್ಸ್‌ಫಾರ್‌ಮರ್ಸ್ ಸರಬರಾಜು ಆಗಿಲ್ಲ — ಹೀಗೆ ನಾನಾ ಬಾಬುಗಳನ್ನು ಹೇಳಿಕೊಂಡು ಇರತಕ್ಕ ಕೆಲಸ ಕಾರ್ಯಗಳನ್ನು ಮುಂದೂಡುವ ಪದ್ಧತಿ ಅವರಲ್ಲಿ ಬಂದಿದೆ. ಈ ಸರ್ಕಾರ ಇಂತಹ ತೊಂದರೆಗಳಾಗತಕ್ಕ ಪರಿಸ್ಥಿತಿಯನ್ನು ಕೂಡಲೇ ತಪ್ಪಿಸಬೇಕು. ಎಷ್ಟು ಬೇಗ ಅಂದಾಜುಗಳನ್ನು ಮಂಜೂರು ಮಾಡಿದ್ದಾರೋ ಅಷ್ಟೇ ಆತುರದಿಂದ ಬೋರ್ಡ್

ಅಥವಾ ಸಂಬಂಧಪಟ್ಟ ಅಧಿಕಾರಿಗಳು ರೈತರಿಗೆ ಬೇಕಾದ ಕೆಲಸ ಕಾರ್ಯಗಳನ್ನು ಮಾಡಿಕೊಡುವುದಕ್ಕೆ ಶಕ್ತಿಯನ್ನು ಹೊಂದಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಟೆಂಪೊರರಿ ಎಸ್ಟಾಬ್ಲಿಷ್‌ಮೆಂಟ್ ಎಂಬುದಾಗಿ ಇಟ್ಟುಕೊಂಡಿದ್ದಾರೆ. ಕಂಬಗಳನ್ನು ನೆಡುವುದಕ್ಕೆ ಮತ್ತು ಲೈನುಗಳನ್ನು ಎಳೆಯುವುದಕ್ಕೆ ಮಾತ್ರವಲ್ಲದೆ ಬೇರೆ ಬೇರೆ ಕೆಲಸಗಳನ್ನು ಮಾಡುವುದಕ್ಕೆ ಕೆಲವು ಟೆಂಪೊರರಿ ಸಿಬ್ಬಂದಿಯನ್ನು ನೇಮಿಸಿದ್ದಾರೆ. ಮೊನ್ನೆ ಒಂದು ಕಡೆ ವಿಚಾರಿಸಿದ್ದೇನೆ. ಸುಮಾರು 10-15 ಜನ ಕೂಲಿಗಳು ಟೆಂಪೊರರಿ ಎಸ್ಟಾಬ್ಲಿಷ್‌ಮೆಂಟಿನಲ್ಲಿ ಕೆಲಸಮಾಡುತ್ತಿದ್ದರು. ಅವರನ್ನು ಕೇಳಿದರೆ ಒಬ್ಬ 50 ಮೈಲಿಗಳ ದೂರದಿಂದ ಬಂದು ಕೆಲಸ ಮಾಡುತ್ತಿದ್ದೇನೆ, ಒಂದು ರೂಪಾಯಿ ಪೈಸಾ ಕೂಲಿ ಕೊಡುತ್ತಾರೆಂದು ಹೇಳುತ್ತಾನೆ. ಇನ್ನೊಬ್ಬ ತನ್ನ ಸ್ಥಳದಿಂದ ಇಲ್ಲಿಗೆ ಬಂದಿದ್ದೇನೆ, 2 ರೂಪಾಯಿಗಳ ಕೂಲಿ ಕೊಡುತ್ತಾರೆಂದು ಹೇಳುತ್ತಾನೆ.

Mr. SPEAKER.—The House will now rise and meet to-morrow at 1 P.M.

The House adjourned at Six of the Clock to meet again at One of the Clock on Thursday, the 15th April 1965.

WD 4999—GPB—500—1-9-1965